Sri H. SIDDAVEERAPPA.—Budget and Budget alone should be taken, is my point.

Mr. SPEAKER.—I facilitate by adjourning the House for 20 minutes. Hon'ble Member Sri Channabasappa, I suppose, will not say, "no," to me. I myself have to consider what I should do. I will give him 15 to 20 minutes. He may retire and tell me. Now I adjourn the House for 15 minutes.

The House adjourned at Thirty-five Minutes past One of the Clock and re-assembled at Fifty Minutes past One of the Clock.

[MR. SPEAKER in the Chair]

Member's Representation.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಇಬ್ಬರು ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆಂದು ವರ್ತಮಾನ ಬಂದಿದೆ. ಅವರಲ್ಲಿ ಶ್ರೀಮಾನ್ ಪಾಟೀಲರು ಒಬ್ಬರು ಮತ್ತು ಇನ್ನೊಬ್ಬರು ಕಾನೂನು ಮಂತ್ರಿಗಳು ಎಂದು ಗೊತ್ತಾಗಿದೆ. ಹೈಕೋರ್ಟ್ ರಿಟ್ ವಿಚಾರದಲ್ಲಿ ರಾಜೀನಾಮೆ ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಇವರು ರಾಜೀನಾಮೆ ಕೊಟ್ಟ ವಿಚಾರ ಸಭೆಗೆ ಗೊತ್ತಾಗಿದೆಯೋ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಪ್ರಾಮುಖ್ಯವಾದ ವಿಚಾರ. ಆದ್ದರಿಂದ...

THE STATEMENT OF THE CHIEF MINISTER ON THE FINANCIAL POSITION OF THE STATE

Motion to Consider.

Mr. SPEAKER.—I do not know that there were things going on when I was away. The House did not meet during that period. I am very happy to announce that an agreement has been arrived at and I have accepted it, and I take the question of settling the business for today and tomorrow; and by virtue of that I am deciding that there will be no Question Hour today and tomorrow. Sri K. H. Patil's motion will be taken up immediately for consideration.

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ನನ್ನ ಪ್ರಸ್ತಾವ ಈ ರೀತಿ ಇದೆ. 2-5 1967ರಂದು ಮಾನ್ಯ ಮುಖ್ಯಮಂತ್ರಿಗಳು ಆರ್ಥಿಕ ಸಮಸ್ಯೆಯ ಬಗ್ಗೆ ಈ ಸಭೆಯಲ್ಲಿ ಹೇಳಿದ ಹೇಳಿಕೆಯನ್ನು ಪರಿಶೀಲಿಸಬೇಕು.

Mr. SPEAKER.—Motion moved as read over by the Member, which in English reads like this :

> "That the Statement made by the Hon'ble Chief Minister on the floor of the Assembly on 2nd May, 1967 regarding the financial position of the State be taken into consideration."

I would only make one observation that while making any remarks or debating, please remember and have in mind the ultimate vital interests of the State, and let the criticism be confined to see that the interests of the State do not come into jeopardy.

[Mr. CHAIRMAN (Dr. R. NAGAN GOWDA) in the Chair].

†ಶ್ರೀ ಕೆ. ಎಚ್. ಪಾಟೀಲ್.—ಸನ್ಮಾನ್ಯ ಸಭಾಧ್ಯಕ್ಷರೇ, ಆಯವ್ಯಯ ವಿಷಯದಲ್ಲಿ ಮೊನ್ನೆ ಈ ಅಧಿವೇಶನವನ್ನು ಮೊಟಕುಗೊಳಿಸಿದ ಬಗ್ಗೆ ಚರ್ಚೆ ನಡೆದಾಗ ನಮ್ಮ ಈ ಸಭೆಯ ನಾಯಕರು ಹಾಗೂ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು ದಿನಾಂಕ 2-5-1967ರಂದು ಈ ಸಭೆಯ ಅವಗಾಹನೆಗಾಗಿ ಮೊಟಕುಗೊಳಿಸಿದ ಕಾರಣವನ್ನು ವಿವರಿಸಿದ್ದಾರೆ. ಮೊಟಕುಗೊಳಿಸಿದ ಕಾರಣವನ್ನು ವಿವರಿಸುವುದರ ಜೊತೆಗೆ ಬಹು ಮಹತ್ವಪೂರಿತವಾದಂಥ ಹಾಗೂ ರಾಜ್ಯದ ಹಿತದೃಷ್ಟಿಯಿಂದ ನಮ್ಮೆಲ್ಲರ ಗಮನವನ್ನು ಸೆಳೆಯುವಂಥ ಅನೇಕ ಸಮಸ್ಯೆಗಳನ್ನು ಅವರ ಭಾಷಣ ಉದ್ಘಾಟಗೊಳಿಸಿದೆ. ಅದನ್ನು ವಿಚಾರ ಮಾಡುವ ಅತ್ಯಗತ್ಯತೆ ಈ ಸಭೆಗೆ ಈಗ ಉಂಟಾಗಿದೆ. ಪ್ರಥಮವಾಗಿ ಇಂತಹ ಒಂದು ಮಹತ್ವಪೂರ್ಣವಾದಂಥ ಸಮಸ್ಯೆಯನ್ನು ವಿಚಾರ ಮಾಡುವುದಕ್ಕೆ ನಾನು ಕಳುಹಿಸಿದಂಥ ಪ್ರಸ್ತಾವಕ್ಕೆ ಸಭಾಧ್ಯಕ್ಷರು ಅನುಮತಿ ಕೊಟ್ಟಿದ್ದಕ್ಕಾಗಿ ನಾನು ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ಕೆಲವಾರು ಮಾತುಗಳನ್ನು ಹೇಳಬಯಸುತ್ತೇನೆ.

ಆಯವ್ಯಯ ಅಧಿವೇಶನ ಕಾಲಕ್ಕೆ ಮಾನ್ಯ ಶ್ರೀ ರಾಮಕೃಷ್ಣ ಹೆಗ್ಗಡೆಯವರು 24-3-1967 ರಂದು 1967-68ನೆಯ ವರ್ಷದ ಆಯವ್ಯಯ ಪತ್ರವನ್ನು ಈ ಸಭೆಯ ಎದುರಿಗೆ ಇಟ್ಟಿದ್ದಾರೆ. ಕೇವಲ ಅವರು ಬಜೆಟ್ಟನ್ನು ಇಟ್ಟರು, ಅಷ್ಟೇ ಅಲ್ಲ, ಆಯವ್ಯಯದ ವಿಷಯವಾಗಿ ಬಹಳ ದೀರ್ಘವಾದ ಭಾಷಣವನ್ನು ಸಾಕಷ್ಟು ಅವಧಿಯನ್ನು ತೆಗೆದುಕೊಂಡು ಮಾಡಿದ್ದಾರೆ. ಅವರ ಭಾಷಣವನ್ನು ಚೆನ್ನಾಗಿ ಗಮನಿಸಿ ಕೇಳಿದ್ದೂ ಆಯಿತು. ಆ ಸಂದರ್ಭದಲ್ಲಿ ಈ ಸಭೆಯ ಎದುರಿಗೆ ಹಾಜರು ಮಾಡಿದ ಆಯವ್ಯಯದ ಮುದ್ರಿತ ಪುಸ್ತಕಗಳನ್ನು ನೋಡಿದ ಮೇಲೆ ನಿಜವಾಗಿಯೂ ಅವರು ಬಹಳ ಅಭ್ಯಾಸಪೂರ್ಣವಾಗಿ ಮತ್ತು ಜವಾಬ್ದಾರಿಯುತವಾಗಿ ದೇಶದ ಆಗುಹೋಗುಗಳನ್ನು ಚೆನ್ನಾಗಿ ಅರಿತು ದೇಶದ ಹಾಗೂ ರಾಜ್ಯದ ತಪ್ಪಿಲುಗಳನ್ನು ಪರಿಶೀಲಿಸಿ ಇದನ್ನು ಮಂಡಿಸಿದ್ದಾರೆಂದು ಗೊತ್ತಾಯಿತು. ಅಲ್ಲದೆ ನಮ್ಮ ರಾಜ್ಯದ ಸಂಪನ್ಮೂಲಗಳೇನು, ನಮ್ಮ ರಾಜ್ಯದಲ್ಲಿ ಯಾವ್ಯಾವ ಸಮಸ್ಯೆಗಳಿವೆ ಎಂಬುದನ್ನೆಲ್ಲಾ ವಿವರಿಸಿದರು. ಇನ್ನೂ ಯಾವ್ಯಾವ ಕೆಲಸಗಳನ್ನು ಮಾಡಬೇಕಾಗಿದೆ, ಯಾವ್ಯಾವ ಕೆಲಸಗಳು ಅರ್ಧಕ್ಕೇ ನಿಂತಿವೆ ಅವನ್ನು ಮುಂದುವರಿಸಿ ಇವೆಲ್ಲವನ್ನೂ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಎಲ್ಲವನ್ನೂ ಕಾರ್ಯಗತ ಮಾಡುತ್ತಾರೆಂಬುದಾಗಿ ಎಲ್ಲರಿಗೂ ಒಂದು ಅಭಿಪ್ರಾಯ ಉಂಟಾಗಿತ್ತು. ಆದರೆ ಮಾನ್ಯ ಮುಖ್ಯ ಮಂತ್ರಿಗಳ ಮಾತನ್ನು ಕೇಳಿದನಂತರ ಈ ರಾಜ್ಯದ ಆರ್ಥಿಕ ಸಚಿವರು ಆಯವ್ಯಯವನ್ನು ಸರಿಯಾದ ರೀತಿಯಲ್ಲಿ ಮಾಡದೆ ಕೇವಲ ಸಂಶಯವನ್ನು ತಾಳುವ ದೃಷ್ಟಿಯಿಂದ ಆಯವ್ಯಯದ ಮುದ್ರಿತ ಪುಸ್ತಕಗಳನ್ನು ನಮ್ಮ ಎದುರಿಗೆ ಅಂದು ಇಟ್ಟಿದ್ದಾರೆಂಬ ಭಾವನೆ ಎಲ್ಲರಿಗೂ ಉಂಟಾಗಿದೆ. ಆಯವ್ಯಯದಲ್ಲಿ ಮಾನ್ಯ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಹೇಳಿದ ಮಾತುಗಳನ್ನು ಮೊದಲು ನಾವು ಪರಿಶೀಲಿಸುವುದು ಅತ್ಯಂತ ಅವಶ್ಯವಿದೆ. ಆದರಲ್ಲಿಯೂ ಈ ಸನ್ನಿವೇಶದಲ್ಲಿ ನಮ್ಮ ನಾಯಕರಿಂದ ಬಂದಂಥ ಮಾತುಗಳನ್ನು ಪರಿಶೀಲಿಸುವುದು ಬಹಳ ಅಗತ್ಯವಿದೆ.

ಶ್ರೀ ರಾಮಕೃಷ್ಣ ಹೆಗಡೆಯವರು ಹೇಳಿದಂಥ ಮಾತುಗಳನ್ನು ಪುನರಪಿ ನೆನಪಿಗೆ ಈ ಸಂದರ್ಭದಲ್ಲಿ ತೆಗೆದುಕೊಳ್ಳುವುದೂ ಕೂಡ ಬಹು ಮುಖ್ಯವಾಗಿದೆಯೆಂದೂ ನನ್ನ ಭಾವನೆ. ಮುದ್ರಿತವಾದಂಥ ಆಯವ್ಯಯ ಪತ್ರದ 3ನೇ ಪುಟದಲ್ಲಿ 1967-68ನೇ ವರ್ಷದ ಅನ್ಯುಯಲ್ ಪ್ಲಾನ್ ಎಂಬ ಪ್ಯಾರಾದಲ್ಲಿ ಈ ರೀತಿ ಹೇಳಿದೆ :

> "As the House is aware, the outlay for 1966-67 was fixed at Rs. 50.82 crores with a Central assistance of Rs. 34 crores and the State had to raise Rs. 16.8 crores."

(ಶ್ರೀ ಕೆ. ಎಚ್. ಪಾಟೀಲ್)

ಅದರ ಬಗ್ಗೆ ವಿವರಗಳನ್ನು ಮುಂದೆ ಕೊಟ್ಟು ಕೊನೆಯಲ್ಲಿ ಈ ರೀತಿ ಹೇಳಿದ್ದಾರೆ:

"The annual plan for 1967-68 has been tentatively fixed at Rs. 62.50 crores with a Central assistance of Rs. 34 crores and anticipated State's resources of Rs. 28.50 crores. This excludes provision of Rs. 110.25 lakhs made in respect of certain Centrally sponsored schemes since transferred to State sector by Government of India with 100 per cent Central assistance."

ಈ ಮಾತನ್ನು ಹೇಳುವಾಗ ಅವರು ಸ್ಪಷ್ಟವಾಗಿ ಕೇಂದ್ರದ ನೆರವಿನ ಬಗ್ಗೆ ನಿರ್ದಿಷ್ಟವಾದ ಅಭಿಪ್ರಾಯವನ್ನು ತಾಳಿದ್ದಾರೆ. ಅವರು ಈ ಸಂಸ್ಥಾನದ ಉತ್ಪನ್ನದ ವಿಷಯದಲ್ಲಿ ಸಂದಿಗ್ಧತೆ ತಾಳಿರುವ ಬಗ್ಗೆ ಹಾಗೂ ಕೇಂದ್ರದ ನೆರವಿನ ಬಗ್ಗೆ ಯಾವ ಒಂದು ಅಕ್ಷರವನ್ನೂ ಸಹ ಸಂಕ್ಷಿಪ್ತವಾಗಿ ಹೇಳಲಿಲ್ಲ. ಆ ಮಾತು ನಿಜವೆಂದು ನಾನು ಭಾವಿಸುತ್ತೇನೆ.

ಅದಾದನಂತರ 34ನೇ ಪುಟದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ:

"The Budget Estimates have assumed Rs. 15.62 crores as Central assistance on account of schemes transferred to State sector and Centrally sponsored schemes kept outside the State Plan."

ಈ ಮಾತನ್ನು ಮಾನ್ಯ ಹಣಕಾಸಿನ ಸಚಿವರು ಅವರ ಭಾಷಣದಲ್ಲಿ ಹೇಳಿದ್ದಾರೆ. ಇದನ್ನೆಲ್ಲಾ ಮೊದಲಿನಿಂದ ನೋಡಿದ್ದರಿಂದ ಅವರು ಕೇಂದ್ರ ಸರ್ಕಾರದೊಡನೆ ಪತ್ರವ್ಯವಹಾರ ಮಾಡಿರುವುದು ನಿಜವೆಂಬುದಾಗಿ ಗೊತ್ತಾಗುತ್ತದೆ. ಒಂದು ಸ್ಪಷ್ಟವಾದ ಅಭಿಪ್ರಾಯವನ್ನು ಮಾನ್ಯ ಸದಸ್ಯರೆಲ್ಲರಿಗೂ ಕೊಡಲಾಗಿದೆ.

ಅದೇ ರೀತಿಯಲ್ಲಿ 45ನೇ ಪುಟದಲ್ಲಿಯೂ ಕೇಂದ್ರ ಹಾಗೂ ರಾಜ್ಯದ ಬಾಂಧವ್ಯದ ಬಗ್ಗೆ ಅವರು ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ:

"There are also questions of overlapping functions of Planning Commission and Finance Commission which affect States' interests."

ಈ ರೀತಿ ಹೇಳಿದ ಮಾತು ಗಮನೀಯವಾಗಿದೆ. ಅದೇ ಪ್ಯಾರಾದಲ್ಲಿ ಕೊನೆಯಲ್ಲಿ ಇನ್ನೊಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ:

"I have no doubt that the present Union Finance Minister who is an elder Statesman with rich experience will give necessary guidance and evolve a suitable working arrangement so that the country's economy may be re-oriented and set on sound lines which would lead to stability and prosperity."

ಎಂದು ಸ್ಪಷ್ಟವಾದ ಮಾತನ್ನೂ ಸಹ ಅವರು ಹೇಳಿದ್ದಾರೆ.

ಇನ್ನು ಸದಸ್ಯರೆಲ್ಲರನ್ನೂ ತಮ್ಮ ಕಾನ್‌ಫಿಡನ್ಸಿಗೆ ತೆಗೆದುಕೊಂಡು ಇರುವ ಹಾಗೆ 50ನೇ ಪುಟದಲ್ಲಿ ಒಂದು ಮಾತನ್ನು ಹೇಳಿದ್ದಾರೆ:

"I can assure the House that steps will be taken to maintain a balanced budget. It is only on the verdict of the people we are occupying different positions in this House"

ಎನ್ನುವ ಮಾತಿಗಾಗಿ ಸಹ ಹೋಗಿದ್ದಾರೆ:

"To look after the welfare of the people is as much the privileged right of the opposition as the treasury benches."

ಇದನ್ನು ಟ್ರೆಜರಿ ಬೆಂಚಿನವರು ಒಪ್ಪಿರುವುದೂ ಸಹ ಆಗಿದೆ, ಅದು ಸಮಯೋಚಿತವಾದ ಸಂಗತಿಯಾಗಿದೆಯೆಂದೂ ಸಹ ಹೇಳಿದ್ದಾರೆ. ಈ ರೀತಿಯಾಗಿ ಎಲ್ಲಾ ಮಾತುಗಳನ್ನೂ ಹೇಳಿ, ಈಗ ನಮ್ಮ ಎದುರಿಗೆ ಹೊಸ ಸಂಗತಿಗಳನ್ನು ಇಡುವುದರಿಂದ ಅವನ್ನು ದೇಶದ ಹಿತದೃಷ್ಟಿಯಿಂದ ವಿಚಾರ ಮಾಡುವುದು ಅತ್ಯಂತ ಅವಶ್ಯವಿದೆ. ಬ್ಯಾಲೆನ್ಸ್ಡ್ ಬಡ್ಜೆಟ್ಟನ್ನು ಕಾಪಾಡಿಕೊಳ್ಳುತ್ತೇವೆ, ಕೇಂದ್ರದ ನೆರವು ಕೆಲವಕ್ಕೆ ಬಂದಿದೆ, ಇನ್ನೂ ಬರುತ್ತದೆ, ಅದಕ್ಕಾಗಿ ನಾಲ್ಕು ತಿಂಗಳ ಕಾಲಾವಧಿಗೆ ವೋಟ್ ಆನ್ ಅಕೌಂಟಿಗೆ ನಿಮ್ಮ ಸಮ್ಮತಿಯನ್ನು ಕೊಡಿ ಎಂದು ಕೇಳಿದರು.

2.00 P.M.

ಅವರ ಭಾಷಣವನ್ನು ಕೇಳಿದ ನಂತರ ಈ ಮಾನ್ಯ ಸಭೆಯವರು ಅವರಮಾತಿನಲ್ಲಿ ಅವರ ಸರ್ಕಾರದಲ್ಲಿ ವಿಶ್ವಾಸವನ್ನು ಇಟ್ಟು 4 ತಿಂಗಳು ಕಾಲದ ಬಜೆಟ್ಟಿಗೆ ಅವಕಾಶವನ್ನು, ಅನುಮತಿಯನ್ನು ಕೊಟ್ಟಿದ್ದಾಯಿತು. 4 ತಿಂಗಳು ಕಾಲದ ಬಜೆಟ್ಟಿಗೆ ಅವಕಾಶವನ್ನು ಕೊಟ್ಟಿದ್ದು ಅಷ್ಟೇ ಅಲ್ಲ, ಉಳಿದ ಅವಧಿಯ ಬಜೆಟ್ಟನ್ನೂ ಸಹ ಈ ಮಾನ್ಯ ಸಭೆಯ ಎದುರಿಗೆ ಇಡಲಾಗಿದೆ. ಆದರೆ ನಮ್ಮ ಮಾನ್ಯ ಮುಖ್ಯ ಮಂತ್ರಿವರ್ಯರು ತಮ್ಮ ಭಾಷಣದಲ್ಲಿ ಹೇಳಿದರು, ಹೊಸದಾಗಿ ಸರ್ಕಾರ ಬಂದ ನಂತರ ನಮಗೆ ಕೇಂದ್ರ ಸರ್ಕಾರದಿಂದ ಕೊಡತಕ್ಕ ಹಣದಲ್ಲಿ ಏನೇನು ಬರುತ್ತದೆ ಎಂಬುದು ಗೊತ್ತಿಲ್ಲ, ಅದ್ದರಿಂದ ಗಂಡಾಂತರ ಬಂದಿದೆ, ಅದು ವಿಚಾರಣೆಯಾಗುವವರೆಗೆ ಈ ಸಭೆಯ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸಬೇಕು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತ ಮಾಡಿದ್ದಾರೆ. ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಭಾಷಣ ಮಾಡುವ ಕಾಲಕ್ಕೆ ಕೇಂದ್ರದಲ್ಲಿ ಹೊಸ ಸರ್ಕಾರ ಬಂದಿರಲಿಲ್ಲವೆ? ಇಂದಿನ ಡೆಪ್ಯುಟಿ ಪ್ರೈಮ್‌ಮಿನಿಸ್ಟರಾದ ಶ್ರೀಮಾನ್ ಮೊರಾರ್ಜಿ ದೇಸಾಯಿ ಅವರು ಹಣಕಾಸಿನ ಖಾತೆಯನ್ನು ವಹಿಸಿಕೊಂಡು ಅವರು ತಮ್ಮ ಕಾರ್ಯನೀತಿ ಮತ್ತು ಧ್ಯೇಯಧೋರಣೆಗಳನ್ನು ಸ್ಫುಟವಾಗಿ ಹೇಳಿದ್ದು ಎಲ್ಲಾ ಪತ್ರಿಕೆಗಳಲ್ಲೂ ವರದಿಯಾದದ್ದನ್ನೂ ಎಲ್ಲರೂ ನೋಡಿಲ್ಲವೇ? ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಪರಸ್ಪರ ವಿಶ್ವಾಸದಿಂದ ವಿಚಾರ ವಿನಿಮಯ ಮಾಡಿಕೊಂಡು ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರಿಗೆ ಕೊಡತಕ್ಕಂಥಹ ಹಣ ಸಹಾಯ ಎಷ್ಟು ಎಂಬುದನ್ನು ಗೊತ್ತು ಮಾಡಿಕೊಂಡು ಅದರ ವಿವರಣೆಯ ಪ್ರಕಾರ ಬಜೆಟ್‌ನ್ನು ತಯಾರಿಸಿ ಅದನ್ನು ಈ ಸಭೆಯಮುಂದೆ ಇಡಲಿಲ್ಲವೇ? ಹಿಂದಿನ ಅಂಕೆ ಸಂಖ್ಯೆಗಳನ್ನು ನೋಡಿ ಯಾವ ಆಧಾರವೂ ಇಲ್ಲದೇ ಇರತಕ್ಕ ಅಂಕೆ ಸಂಖ್ಯೆಗಳನ್ನು ಜೋಡಣೆ ಮಾಡಿಕೊಡು ಈ ಸಭೆಯ ಎದುರಿನಲ್ಲಿಟ್ಟು ನಮ್ಮನ್ನು ಮುಗ್ಧರನ್ನಾಗಿ ಮಾಡಿದ್ದಾರೆ. ನಮ್ಮ ರಾಜ್ಯದ ಆರ್ಥಿಕ ಸಚಿವರಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಯಾವ ರೀತಿ ಇದೆ ಎಂಬುದು ಸ್ಪಷ್ಟವಾಗಿ ಗೊತ್ತಿರಲಿಲ್ಲವೇ? ಕೇಂದ್ರ ಸರ್ಕಾರದವರು ಈ ರಾಜ್ಯ ಸರ್ಕಾರದ ಆಡಳಿತದಲ್ಲಿ ಏನಾದರೂ ಲೋಪದೋಷಗಳನ್ನು ಕಂಡುಹಿಡಿದು ಅವರು ಕೊಡತಕ್ಕ ಹಣಸಹಾಯವನ್ನೇನಾದರೂ ತಡೆ ಹಿಡಿದಿದ್ದಾರೆಯೆ? ಇದರಲ್ಲಿ ಯಾವುದು ನಿಜ ಎಂಬುದನ್ನು ನಾವು ಅರಿಯಬೇಕಾಗಿದೆ. ಘಟನಾಬದ್ಧವಾದ ರಾಷ್ಟ್ರದ ಹಿತದೃಷ್ಟಿಯಿಂದ ಅವಶ್ಯವಾದ ಕೆಲವು ಸಮಸ್ಯೆಗಳ ವಿಚಾರದಲ್ಲಿ ನ್ಯಾಯ ಮಾರ್ಗ ಇಲ್ಲದಂತಾಗಿದೆ. ಸನ್‌ಮಾನ್ಯ ಸಭಾಪತಿಗಳೇ 12—4—67ನೇ ದಿನದ ಇಂಡಿಯನ್ ಎಕ್‌ಪ್ರೆಸ್ ಪತ್ರಿಕೆಯಲ್ಲಿ ಪ್ರಕಟವಾಗಿರತಕ್ಕಂಥ ಒಂದು ಸುದ್ದಿಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ ಅದರಲ್ಲಿ ಈ ರೀತಿ ಹೇಳಿದೆ :

" DESAI RULES OUT CENTRAL AID FOR NON-PLAN SCHEMES

"The Deputy Prime Minister, Mr. Morarji Desai, is understood to have firmly turned down the demand of some States for temporary arrangements for overdrafts, made at yesterday's conference of State Chief Ministers and Finance Ministers.

"Mr. Desai also told the State representatives that they should not expect much by way of additional Central assistance for the current year's plan over and above what had been indicated in the interim budget. "

(Indian Express dated 12th April 1967)

AN HON'BLE MEMBER.—He is quoting the statement of Mr. Morarji Desai.

Sri K. H. PATIL.—I am not simply quoting the statement. I am contradicting the statement made by the Leader of this House. He was there in the meeting at New Delhi and they had taken a decision. Inspite of that he has taken a differeent stand. He knew the mind of the Centre. He could have adjusted himself according to the circumstances.

Further the passage reads:

"Further Mr. Desai rejected the plea by some of the States that the Centre should reimburse the increase in their expenditure resulting from the rise in the dearness allowance to their employees......

"Those who participated in to-day's discussion were the Chief Ministers of Bihar, Gujarat, Hariyana, Kerala, Madhya Pradesh, Madras and Mysore and the Finance Minister of Maharastra.

One of the major demands made by the States was that the tempo of planning should be stepped up and that Central assistance to the States should be increased for this purpose. They pointed out that the Central Assistance indicated for the first two years of the Fourth plan was less than the average in relation to the Fourth plan period." ಎಂದು ಇದೆ.

ಈ ಪತ್ರಿಕೆಯಲ್ಲಿ ವರದಿ ಮಾಡಿರುವುದನ್ನು ನೋಡಿದರೆ ಸ್ಪಷ್ಟ ರೀತಿಯಿಂದ ನಮ್ಮ ರಾಷ್ಟ್ರದ ಆರ್ಥಿಕ ಮಂತ್ರಿಗಳಾದ ಶ್ರೀಮಾನ್ ಮೊರಾರ್ಜಿದೇಸಾಯಿ ಅವರು ಹಾಗೂ ನಮ್ಮ ಮುಖ್ಯದ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಒಂದು ಸಂಯುಕ್ತವಾದ ಸಭೆಯಲ್ಲಿ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯ ವಿಷಯವಾಗಿ ಆಲೋಚನೆ ನಡೆಸಿ ಮಾತುಕತೆಗಳನ್ನು ನಡೆಸಿದನಂತರ ಒಂದು ಪಾಲಸಿ ತತ್ವದ ಮೇಲೆ ಅದು ನಿರ್ಧಾರವಾಗಿದೆ. ಈ ನಿರ್ಧಾರ ಆದದ್ದು ಒಂದು ತಿಂಗಳ ಹಿಂದೆ. ಈ ಸಭೆಯನ್ನು ಕರೆಯುವ ಪೂರ್ವದಲ್ಲಿ ನಮ್ಮ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರಿಗೆ ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಸಿಕ್ಕುವ ಹಣ ಸಹಾಯವೆಷ್ಟು, ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ಹಣ ಸಿಕ್ಕುತ್ತದೆ ಎಂಬುದು ಅವರಿಗೆ ಸ್ಪಷ್ಟವಾಗಿ ಗೊತ್ತಿತ್ತು. ಆದ್ದರಿಂದ ಅದರಲ್ಲಿ ಏನೂ ಹೆಚ್ಚು ಕಡಿಮೆ ಆಗಿಲ್ಲ ಎಂದು ಕಾಣುತ್ತದೆ. ಇಷ್ಟಾದರೂ ಈಗಾಗಲೇ ನಡೆದಿರುವ ಘಟನೆಗಳನ್ನು ನೋಡಿದರೆ ಕೇಂದ್ರದಿಂದ ನಮಗೆ ಬರತಕ್ಕ ಹಣ ಕಡಿಮೆಯಾಗಬಹುದು ಎಂದು ನಮ್ಮ ನಾಯಕರಾದ ನಿಜಲಿಂಗಪ್ಪನವರಿಗೆ ಅಭಿಪ್ರಾಯ ಇದ್ದರೆ ದೇಶದಲ್ಲಿ ಅತ್ಯಂತ ಅವಶ್ಯಕವಾದ ಕಾರ್ಯಗಳನ್ನು ಮಾತ್ರ ಮಾಡಬೇಕಾಗಿತ್ತು. ಈಗಾಗಲೇ ವೋಟ್ ಆನ್ ಅಕೌಂಟ್ ತೆಗೆದುಕೊಂಡ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಭಾಷಣದಲ್ಲಿ ಇದ್ದಂತಹ ಸಂಗತಿಗಳನ್ನು ಅವಲೋಕಿಸಿದರೆ ಅನವಶ್ಯಕವಾಗಿ ಮಾಡಿರತಕ್ಕ ಕೆಲವು ಖರ್ಚಿನ ಬಾಬಗಳು ಗೊತ್ತಾಗುತ್ತವೆ. ಈಗ ಉದಾಹರಣೆಗೆ ಹೇಳುವುದಾದರೆ ಡಿಲ್ಲಿಯಲ್ಲಿ ಮೈಸೂರು ಹೌಸ್ ಕಟ್ಟುವುದಕ್ಕೆ, ಗುಲ್ಬರ್ಗದಲ್ಲಿ ಒಂದು ಬಂಗಲೆಯನ್ನು ಕಟ್ಟುವುದಕ್ಕೆ, ಬೆಂಗಳೂರಿನಲ್ಲಿ ಸೂಪರ್ ಮಾರ್ಕೆಟ್ ತೆರೆಯುವುದಕ್ಕೆ ಕನ್ನಡದ ಹೆಸರಿನಲ್ಲಿ ಸಿನಿಮಾದಲ್ಲಿ ಮುಂದುವರಿದವರಿಗೆ ಬಹುಮಾನವಾಗಿ ಹಣವನ್ನು ಕೊಡುವುದಕ್ಕಾಗಿ ಸರ್ಕಾರದ ಬೊಕ್ಕಸದಲ್ಲಿದ್ದ ಹಣವನ್ನು ಸೂರೆ ಮಾಡಿರುವುದು ನಿಜವಾಗಿಯೂ ಸರಿಯೇ? ಇಂಥಾ ಸಂಗತಿಗಳಿಗೆ ಹಣವನ್ನು ಹೇರಳವಾಗಿ ಖರ್ಚು ಮಾಡುವ ಅವಶ್ಯಕತೆ ಏನಿತ್ತು? ಈಗ ಸುಮಾರು 4—5 ದಿವಸಗಳ ಪರ್ಯಂತ ಈ ಸಭೆಯಲ್ಲಿ ನಡೆದ ನಡವಳಿಕೆಗಳನ್ನು ನೋಡಿದರೆ ಇದರಲ್ಲಿ ಅನೇಕ ಘಟನಾತ್ಮಕವಾದ ಸಮಸ್ಯೆಗಳು ಬಂದಿವೆ. ಈ ಸಮಸ್ಯೆಗಳನ್ನು ನಿವಾರಿಸುವ ರೂಪದಲ್ಲಿ ಈ ಸಭೆಯ ಕಾರ್ಯಕಲಾಪಗಳು ನಡೆಯಲಿಲ್ಲ. ಈ ರೀತಿ ಇಲ್ಲಿ ಕಾರ್ಯಕಲಾಪಗಳು ನಡೆಯದೇ ಇರುವುದಕ್ಕೆ ನಮ್ಮ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರೇ ಕಾರಣ. ಈ ರೀತಿ ಸಭೆಯ ಕಾರ್ಯಕಲಾಪಗಳು ಸರಿಯಾಗಿ ನಡೆಯದೇ ಇರುವಾಗ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರ ನಾವು ಅವಸರವಾಗಿ ಬಜೆಟ್ಟನ್ನು ತಯಾರು ಮಾಡಿದ್ದೇವೆ ಇದನ್ನು ಇನ್ನೂ ಪರಿಶೀಲಿಸಬೇಕು ಎಂದು ಹೇಳಿದ್ದರೆ ವಿರೋಧ

ಪಕ್ಷದವರಾದ ನಾವೆಲ್ಲರೂ ಸಹ ಅದಕ್ಕೆ ತಳಹದಿಯಾಗಿ ಪ್ರತಿಯೊಂದು ಕಾರ್ಯಕ್ರಮದಲ್ಲಿಯೂ ನಾವು ಸಹಕರಿಸಬಹುದಾಗಿತ್ತು. ಆದರೆ ಅದರ ಬಗ್ಗೆ ಒಂದು ಅಕ್ಷರವೂ ಸಹ ನಮ್ಮ ನಾಯಕರಾದ ನಿಜಲಿಂಗಪ್ಪನವರ ಬಾಯಲ್ಲಿ ಬರಲಿಲ್ಲ. ಇದು ದುರ್ದೈವದ ಸಂಗತಿ. ಪತ್ರಿಕೆಗಳಲ್ಲಿ ತಪ್ಪುವರದಿಯಾಗಿದೆ. ವಿರೋಧ ಪಕ್ಷದವರು ಅಡಚಣೆ ಮಾಡಿದರು ಎಂದು ವರದಿಯಾಗಿದೆ. ಈ ಕಾರ್ಯಕ್ರಮದ ಬಗ್ಗೆ ವಿರೋಧ ಪಕ್ಷದವರಿಂದ ಇಂದು ಅಡ್ಡಿ ಆಗಲಿಲ್ಲ ಎಂದು ಹೇಳಬೇಕಾಗಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹೀಗಿರುವಾಗ ಇಷ್ಟೊಂದು ಹಣವನ್ನು ಸೂರೆ ಮಾಡಿ ಕೊಡುವುದನ್ನು ಈ ಮಹಾ ಸಭೆ ಅಡ್ಡಿ ಮಾಡುವುದು ಸಾಧ್ಯವೇ ಅಲ್ಲವೇ ಎಂಬುದನ್ನು ಸಭಾಪತಿಗಳ ಗಮನಕ್ಕೆ ತರಬಯಸುತ್ತೇನೆ. ಸನ್ಮಾನ್ಯ ಸಭಾಪತಿಗಳೇ, ಬಡ್ಜೆಟ್ಟಿನ ವಿಷಯದಲ್ಲಿ ನಮಗೆ ಇಂದು ಮಾತನಾಡಲು ಸಂಪೂರ್ಣವಾದ ಅವಕಾಶ ಇಲ್ಲ. ಏಕೆಂದರೆ, ಬಡ್ಜೆಟ್ ನಮ್ಮ ಎದುರಿಗೆ ಇದ್ದರೂ ಸಹ ಬಡ್ಜೆಟ್ ವಿಷಯ ಅಜೆಂಡಾದಲ್ಲಿ ಬರಲಿಲ್ಲ. ಬಡ್ಜೆಟ್ ವಿಷಯದಲ್ಲಿ ನಮ್ಮ ಅಭ್ಯಾಸ ಪರಿಪೂರ್ಣವಾಗಿದೆ. ನೀವು ಈ ಬಡ್ಜೆಟ್ಟಿನ ವಿಷಯದಲ್ಲಿ ಪರಿಪೂರ್ಣವಾದ ವಿಚಾರಗಳನ್ನು ಹೇಳಿ. ನಾವು ಈ ಸಭೆಯ ಸಮಯವನ್ನು ಹಾಳುಮಾಡಲು ಬಯಸುವುದಿಲ್ಲ. ಬಡ್ಜೆಟ್ ತಯಾರು ಮಾಡುವಾಗ ಆಳುವ ಪಕ್ಷದವರು ರಾಜ್ಯದ ಜನತೆಗೆ ಏನು ಬೇಕಾಗಿದೆ ಎಂದು ಆಲೋಚನೆ ಮಾಡಬೇಕು. ರಾಜ್ಯದ ಜನತೆಯ ಹಿತಾಸಕ್ತಿಯನ್ನು ಬೆಳೆಸುವುದಕ್ಕೂ, ಉದ್ದಿಮೆಗಳನ್ನು ಬೆಳೆಸುವುದಕ್ಕೂ ಮತ್ತು ಉತ್ಪತ್ತಿಯನ್ನು ಹೆಚ್ಚು ಮಾಡುವುದಕ್ಕೆ ಏನು ಪ್ರಯತ್ನ ಮಾಡಬೇಕಾಗಿದೆ ಎಂಬುದನ್ನು ಯೋಚನೆ ಮಾಡಬೇಕು. ನಮ್ಮ ರಾಜ್ಯದ ಬೆಳವಣಿಗೆಗೆ ಯಾವ ಯಾವ ಸಾಮಾನುಗಳು ಸಿಕ್ಕುವುವು, ಯಾವ ಯಾವ ಉದ್ಯೋಗ ಪ್ರಾರಂಭಿಸಬೇಕಾಗಿದೆ, ಎಂತೆಂತಹ ರೀತಿಯಲ್ಲಿ ತಯಾರು ಮಾಡಬೇಕು ಎಂಬುದನ್ನು ತಿಳಿದುಕೊಂಡು ಜನತೆಯ ನೇರವಾದ ವಿಶ್ವಾಸವನ್ನು ಪಡೆಯಬೇಕು. ದುರ್ದೈವದಿಂದ ಒಂದು ಪ್ರಯತ್ನವೂ ಸಹ ನಮ್ಮ ರಾಜ್ಯ ಸರ್ಕಾರದಿಂದ ನಡೆಯುವುದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಪ್ಲಾನಿಂಗ್ ಕಮೀಷನ್ನಿನವರು ಕೊಟ್ಟಂಥ ಹಣವನ್ನು ಮಾತ್ರ ಬಳಸಿಕೊಳ್ಳೋಣ ಎನ್ನುವ ವಿಚಾರ ಮಾಡುವುದಾದರೆ ನಿಜವಾಗಿ ಜನತೆಯ ಕಲ್ಯಾಣ ಆಗಲಿಕ್ಕೆ ಆಗುವುದಿಲ್ಲ ಮತ್ತು ಅವರ ಆಗುಹೋಗುಗಳನ್ನು ಕಷ್ಟ ನಷ್ಟಗಳನ್ನು ದೂರ ಮಾಡಲಿಕ್ಕೆ ಆಗುವುದಿಲ್ಲ. ಆದುದರಿಂದ ಆ ಸಂಶಯಗಳನ್ನು ಯಾವ ರೀತಿ ಬಿಡಿಸಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ನಂತರ ಕೆಲವು ಹಣವನ್ನು ಜನತೆಯೂ ಕೊಡಬೇಕು, ಸರ್ಕಾರದಿಂದಲೂ ಕೆಲವು ದೊರೆಯಬೇಕು, ಸಂಪನ್ಮೂಲಗಳನ್ನು ವೃದ್ಧಿಮಾಡಲಿಕ್ಕೆ ಸಂದರ್ಭ ಬರಬೇಕು ಎಲ್ಲವನ್ನೂ ಬಿಟ್ಟುಕೊಟ್ಟು ಕೇವಲ ಕೇಂದ್ರಸರ್ಕಾರ ಹಣಕೊಟ್ಟಿದ್ದನ್ನೇ ನಿರೀಕ್ಷಿಸುವುದಾದರೆ, ಅರಿವೆಯನ್ನು ತೆಗೆದುಕೊಂಡು ಅಂಗಿಹೊಲಿದು ಮೈಗೆ ಸರಿ ಹೋಗುವುದಿಲ್ಲ ಎಂದ ಹಾಗಾಗುತ್ತದೆ. ಆದಕ್ಕೆ ಬದಲು, ಮೈ ಎಷ್ಟು ಇದೆ ಅದಕ್ಕೆ ಎಷ್ಟು ಅರಿವೆಬೇಕು ಎಂದು ಕೆಲಸ ಮಾಡಬೇಕಾಗಿದೆ. ಈ ಉದ್ದೇಶ ಸರ್ಕಾರದ ಮನಸ್ಸಿನಲ್ಲಿದ್ದಂತೆ ಕಂಡು ಬರುತ್ತದೆ. ಇದು ನಿಜವಾಗಿ ಬದಲಾವಣೆಯಾಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಎಂತಹ ಮಹತ್ವವಾದ ಮಾತು ಇದ್ದಾಗ್ಯೂ ಸಹ ಒಂದು ಸಂತೋಷ ಅನಿಸುತ್ತದೆ. ಆ ಸಂತೋಷ ಏನೆಂದರೆ, ಮಾನ್ಯ ನಿಜಲಿಂಗಪ್ಪನವರು ಸಾಕಷ್ಟು ಮುಂಜಾಗರೂಕತೆ ವಹಿಸಿದ್ದಾರೆ. ನಮ್ಮ ಮುಖ್ಯಮಂತ್ರಿಯವರು ಡೆಲ್ಲಿಗೆಹೋಗಿ ಅಲ್ಲಿ ಆರ್ಥಿಕ ಮಂತ್ರಿಗಳ ಕಾನ್‌ಫರೆನ್ಸ್‌ನಲ್ಲಿ ನಮ್ಮ ರಾಜ್ಯದ ಸಂಪೂರ್ಣವಾದ ವಿವರಗಳನ್ನು ಇಟ್ಟಿದ್ದಾರೆ ಎಂದು ಭಾವಿಸಿರುವೆ, ವಿವರಗಳ ನಂತರ ಈ ನಿರ್ಣಯಕ್ಕೆ ಬಂದಿದ್ದಾರೆ. ಹಿರಿಯರಾದವರು ಸರಿಯಾದ ರೀತಿಯಲ್ಲಿ ಮುಂದುವರಿಯಬೇಕೆಂದು ಭಾವಿಸುವೆ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ನಿಜವಾದ ಸಂಗತಿ ಹೊರಬರದೆ ವಿನಾ ಆ ಅಭಿಪ್ರಾಯವನ್ನೇ ತಾಳುವೆ. ಯಾವ ಯಾವ ರೀತಿಯಿಂದ ನಮಗೆ ಹಣಕೊಡಬೇಕು ಎಂಬುದು ನಿಕಾಲಿಯಾಗಿದ್ದರೂ ಸಹ ಈ ಮತ್ತಾವ ಸಭೆಯ ಎದುರಿಗೆ ಒಂದು ಮಾತನ್ನೂ ಆಡದೇ ಇದ್ದುದರಿಂದ ಈ ರೀತಿಯ ಪರಿಣಾಮ ಇಂದಿನ ಸಭೆಗೆ ಬಂತು. ಆದರೂ ಸಹ ಭಾಷಣ ಮಾಡಲು ಎದ್ದಾಗ ನನಗೆ ಅನಿಸುತ್ತವೆ, ನಿಜವಾದ ಭಾಷಣವನ್ನು ಸಮರ್ಪಕವಾದ ರೀತಿಯಲ್ಲಿ ಮಾಡಿ ಈ ಸಭೆಯನ್ನು ಸಂತುಷ್ಟಗೊಳಿಸುವ ವಿಚಾರ ಏನೋ ಇದೆ, ಆ ಭಾಷಣ ಸರಿಯಾಗಿ ಇರಲಿ, ಇಲ್ಲದೇ ಇರಲಿ ಅದು ತಮ್ಮ ನಡುವಳಿಕೆ ಸಮರ್ಥನೆಗಾಗಿ ಮಾಡಿದರೇ ವಿನಾ, ನಿಜವಾದ ಸಂಗತಿಗಳನ್ನು ಸಭೆಯ ಎದುರುಗಡೆ ಇಡಲು ಪ್ರಯತ್ನ ಪಟ್ಟಿಲ್ಲ. ಇದು ನಿಜವಾಗಿಯೂ ಶೋಚನೀಯವಾದ ಸಂಗತಿ. ಶ್ರೀಮಾನ್ ನಿಜಲಿಂಗಪ್ಪನವರು ಈ ಸಭೆಯಲ್ಲಿ ಮಾತನಾಡುವಾಗ ಮೊಟ್ಟ ಮೊದಲನೆಯದಾಗಿ ಹೇಳಿದರು : ನನಗೆ ಮಾತನಾಡಬಾರದು ಎನ್ನುವ ಇಚ್ಛೆ ಇಲ್ಲ, ಸಭೆಯ ಮುಂದೆ ಅನೇಕ ವಿಷಯಗಳನ್ನು ತಿಳಿಸಬೇಕೆಂದು ಮಾಡಿದ್ದೆ. ಆದರೆ ಅಧ್ಯಕ್ಷರು ಅವಕಾಶ ಕೊಟ್ಟು ಕರೆಯದೇ ಇದ್ದುದರಿಂದ ನಾನು ಸುಮ್ಮನಿದ್ದೆ ಎಂದು. ಈ ಮಾತನ್ನು ಅವರು ಈ ಸಭೆಯ ಎದುರುಗಡೆ ಹೇಳತಕ್ಕಂಥ ಮಾತೇ! ಅನೇಕ ವರ್ಷ ಪಾರ್ಲಿಮೆಂಟರಿ ಪ್ರೊಸೀಜರ್ ಅನುಭವವನ್ನು ಪಡೆದ, ರಾಜ್ಯದ ನಾಯಕರಾಗಿ, ಮುಖ್ಯಮಂತ್ರಿಗಳಾಗಿ ಹಾಗೂ ಮಾನ್ಯ ಸಭೆಯ ನಾಯಕ

(ಶ್ರೀ ಕೆ. ಎಚ್. ಪಾಟೀಲ್)

ರಾಗಿರುವ ಶ್ರೀಮಾನ್ ನಿಜಲಿಂಗಪ್ಪನವರಿಗೆ ಪಾರ್ಲಿಮೆಂಟರಿ ಪ್ರೊಸೀಜರ್ ವಿಷಯದಲ್ಲಿ ನಾನು ಹೇಳಲು ಹವ್ಯಾಸ ಪಡುವುದಿಲ್ಲ. ಹಾಗೆ ಮಾಡಿದರೆ ಮೊಮ್ಮಕ್ಕಳು ಅಜ್ಜಮ್ಮನಿಗೆ ದಮ್ಮು ಕಲಿಸಿದಂತಾಗುತ್ತದೆ. ಈ ಸಭಾ ನಾಯಕರು ಮಾತನಾಡುವುದಾದರೆ ಎಂದೂ ಅವರು ಮಾತನಾಡುವುದು ಬೇಡ ಎಂದು ಯಾರೂ ಹೇಳುವುದಿಲ್ಲ. ಅನೇಕ ಸದಸ್ಯರು ಮಾತನಾಡಬೇಕು ಎಂದು ತಮ್ಮ ತಮ್ಮ ಅಭಿಪ್ರಾಯವನ್ನು ಹೇಳುವಾಗ ಸುಮ್ಮನೆ ಇರುವ ಅಧ್ಯಕ್ಷರು ಮಾನ್ಯ ಲೀಡರ್ ಈ ಸಭೆಗೆ ಬೇಕಾದ ವಿಷಯ ಹೇಳಲು ಎದ್ದು ನಿಂತರೆ ಸುಮ್ಮನೆ ಇರಿ ಎಂದು ಹೇಳಲು ಸಾಧ್ಯ ಇತ್ತೇ? ನಿಜವಾಗಿ ಸಾಧ್ಯ ಇಲ್ಲ. ಕೊನೆಯಲ್ಲಿ ಅಂತೂ ಮಾತನಾಡಿದ್ದಾರೆ. ಅವರನ್ನು ಸಂತೋಷಮಯವಾದ, ಸ್ವಾಗತಪರವಾದ ರೀತಿಯಲ್ಲಿ ಕಾಣಬಹುದಾಗಿತ್ತು. ಆದರೆ ಅವರು ನಿಜವಾದ ಸಂಗತಿಯನ್ನು ಹೇಳುವ ಹವ್ಯಾಸ ಮಾಡಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವರು ಮಾಡಿರುವ ಭಾಷಣವನ್ನು ನಾವು ಇಂದು ಪರಿಶೀಲಿಸಬೇಕಾಗಿದೆ. ಇನ್ನು ಅವರು ಬಹಳ ಘನವತ್ತರವಾದ ವಿಚಾರವನ್ನು ಹೇಳುತ್ತಾ ದೊಡ್ಡ ಮನಸ್ಸನ್ನೂ ಮಾಡಿ ಇನ್ನೂ ವಿಶಾಲವಾದ ರೀತಿಯಲ್ಲಿ ಹೇಳಿದ್ದರೆ ಚನ್ನಾಗಿತ್ತು. ವಿಶಾಲವಾದಂಥ ಗುಣ. ಈ ಮನೆಯ ಬಗ್ಗೆ ಎಷ್ಟು ಗಾಂಭೀರ್ಯ ಇದೆ, ಎಷ್ಟು ಮರ್ಯಾದೆ ಇದೆ, ಒಳಗೂ ಹೊರಗೂ ಸಹ ಮಾಡಿದ್ದನ್ನೂ ಒಳ್ಳೆಯ ಗಣನೀಯವಾದ ರೀತಿಯಲ್ಲಿ ಹೇಳಿದ್ದಾರೆ ಎಂದು ಹೇಳಬಹುದಿತ್ತು. ನಾನು ಶಾಸನ ಸಭೆಗೆ ಹೊಸಬನಾಗಿದ್ದರೂ ಶಾಸನ ಸಭೆಗಳ ನಡೆವಳಿಕೆಗಳನ್ನು ಓದಿದ್ದೇನೆ. ಎಷ್ಟು ಗಾಂಭೀರ್ಯಭಾವದಿಂದ ಸದಸ್ಯರನ್ನು ಕಾಣುತ್ತಾರೆ ಎಂದು ನೋಡಿದ್ದೇನೆ. ಭಾರತ ದೇಶದಲ್ಲಿ ಪ್ರಥಮತಃ ಶ್ರೀಮಾನ್ ನಿಜಲಿಂಗಪ್ಪನವರ ವಾಕ್ಯವನ್ನು ನೋಡಿದಾಗ ಕಾಣುತ್ತದೆ : "what is the use in making a statement that I treat the members of this House with disrespect? If any member doubts let it be removed from his mind. I have the highest respect for the House" ಎಂದು ಹೇಳಿದ್ದಾರೆ. ನಾನು ಅವರನ್ನು ಕೇಳುವುದು ಇಷ್ಟೇ : ನಮಗೆ ಬೇಕಾದ ಮಾಹಿತಿಯನ್ನು ದೊರಕಿಸಿಕೊಡಿ. ನಿಜವಾದ ಸಂಗತಿ ಹೇಳಿ. ರಾಜ್ಯದ ಹಿತವನ್ನು ಕೇಳುವವರು ನೀವಾಗಿದ್ದರೂ ಸಹ ಜನತೆಯ ಹಿತರಕ್ಷಣೆ ಮಾಡುವ ಗುತ್ತಿಗೆದಾರರು ನೀವು ಅಲ್ಲ. ಅಧಿಕಾರ ಪಟ್ಟದಲ್ಲಿ ನೀವು ಇಂದು ಇರಬಹುದು...

[*Interruption*]

Sri AZEEZ SAIT (Narasimharaja).—I rise to a point of order, Sir, whether the Hon'ble Member on the Treasury Banch has the right to obstruct the members speaking on our side without addressing the Chair!

Mr. CHAIRMAN.—Members should address the Chair only. The hon. Member may continue.

ಶ್ರೀ ಕೆ. ಎಚ್. ಪಾಟೀಲ್.—ನಾನು ಶ್ರೀಮಾನ್ ನಿಜಲಿಂಗಪ್ಪನವರ ಹತ್ತಿರ ಕೇಳುವುದು ಇಷ್ಟೆ—ಇವತ್ತಿನ ದಿವಸ ನೀವು ರಾಜ್ಯವನ್ನು ಆಳುವವರು, ಇಷ್ಟು ಗಂಟೆಗಳ ಕಾಲ ಈ ಸಭೆಯ ಕಾಲವನ್ನು ವ್ಯರ್ಥ ಮಾಡಿ, ರಾಜ್ಯದ ಜನತೆಯ ಹಿತಾಸಕ್ತಿಗಳನ್ನು ಕಾಪಾಡುವುದನ್ನು ಬಿಟ್ಟು ರಾಜ್ಯದ ಬೊಕ್ಕಸವನ್ನು ಬರಿದುಮಾಡಿದ್ದು ಸಮಸ್ತ ಎರಡು ಕೋಟಿ ಜನತೆಯ ಅಂತರಾಳದಲ್ಲಿದೆ. ಆಳುವ ಪಕ್ಷದವರು ವಿರೋಧ ಪಕ್ಷದವರ ಘನತೆ ಗೌರವಗಳನ್ನು ಕಡೆಗಾಣಿಸಿ ಅದನ್ನು ಹತ್ತಿಕ್ಕಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಆಳುವ ಪಕ್ಷಕ್ಕೆ ಎಷ್ಟು ಗೌರವ ಗಂಭೀರ ಘನತೆಗಳಿವೆಯೋ ಅಷ್ಟೇ ವಿರೋಧ ಪಕ್ಷಗಳಿವೆ ಎಂಬುದನ್ನು ಪ್ರಜಾಪ್ರಭುತ್ವದ ಧುರೀಣರು ಹೇಳಿದ್ದಾರೆ. ಪ್ರಜಾಪ್ರಭುತ್ವದ ಕೋಡ್ ಆಫ್ ಕಾಂಡಕ್ಟ್ ವಿಚಾರ ಅಧಿಕಾರದಲ್ಲಿರುವ ನಿಮಗಾದರೂ ನಾವು ಹೇಳಬೇಕೆ? ನಾವು ಕೇಳುವುದು, ನಿಮ್ಮ ಗುಪ್ತ ರಹಸ್ಯವನ್ನು ಬಯಲಿಗೆ ಎಳೆಯಿರಿ ಎಂದಲ್ಲ, ಅಥವಾ ನಿಮ್ಮ ಇನ್ನಿತರ ಪತ್ರಗಳನ್ನು ಬಹಿರಂಗಪಡಿಸಿರಿ ಎಂದಲ್ಲ. ನಾವು ಕೇಳುತ್ತಿರುವುದು ಜನತೆಯ ಕುತೂಹಲವನ್ನು ಎಳೆದಿರತಕ್ಕ ಬಜೆಟನ್ನು ನಮ್ಮ ಎದುರಿಗೆ ಇಟ್ಟಿದ್ದೀರಿ, ಅದರಲ್ಲಿರುವ ಅಂಕೆಸಂಖ್ಯೆಗಳನ್ನು ನೀವು ಸರಿಯಾದ ರೀತಿಯಲ್ಲಿ, ಸಮರ್ಪಕವಾದ ರೀತಿಯಲ್ಲಿ, ಯುಕ್ತವಾದ ರೀತಿಯಲ್ಲಿ ನಮ್ಮ ಮನಸ್ಸಿಗೆ ಪ್ರಕಟಪಡಿಸಿ ಎಂದು ಕೇಳಿದಾಗ, ಅದಕ್ಕೆ ಸರಿಯಾದ ಮತ್ತು ಸಮರ್ಪಕವಾದ ಉತ್ತರವನ್ನು ಈ ಸಭೆಗೆ ಕೊಡದೆ ಇಷ್ಟರವರೆಗೆ ಆಗಿರುವ ಅಡಚಣೆಯನ್ನು ಉಂಟು ಮಾಡಿದವರು ತಾವಲ್ಲವೇ ಸ್ವಾಮಿ?

ಇನ್ನು ರೆಸ್ಪೆಕ್ಟ್‌ನ ವಿಚಾರ ಅಂದರೆ, ಅದಕ್ಕೆ ನೀವು ಬೇಕಾದರೆ, ನಮ್ಮನ್ನು ಉಗ್ರವಾಗಿ ನೋಡಿ, ನಾವು ತಪ್ಪು ಮಾಡಿದರೆ ದಂಡಿಸಿ, ಆದರೆ ನಮ್ಮ ಹಿಂದೆ ಇರುವ, ನಮ್ಮನ್ನು ಆರಿಸಿ ಕಳಿಸಿರುವ ಜನತೆಗೆ

ಕೊಡಲಿಯ ಪೆಟ್ಟು ಹಾಕುವಂತೆ, ನಮಗೆ ಕೊಡುವ ಮರ್ಯಾದೆಯನ್ನು ಅವಮರ್ಯಾದೆಯಾಗಿ ಮಾಡಬಾರದೆಂದು ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಈ ರೀತಿಯಾಗಿ ವಿರೋಧಪಕ್ಷದವರು ಅವಮರ್ಯಾದೆಗೆ ಈಡಾದರೆ, ಎರಡು ಕೋಟಿ ಜನ ಏನೆಂದು ತಿಳಿಯುತ್ತಾರೆ ? ಆ ರೀತಿ ಆಗಬಾರದು. ಮಾನ್ಯ ಶ್ರೀ ನಿಜಲಿಂಗಪ್ಪನವರು ಅಂಥ ದೃಷ್ಟಿಯಿಂದ ಈ ಸಮಸ್ಯೆಯನ್ನು ಕಾಣಬಾರದು. ಇವತ್ತಿನ ದಿವಸ ಪ್ರಜಾಪ್ರಭುತ್ವದ ಬೆಳವಣಿಗೆಯಾಗಬೇಕಾದರೆ, ಮತ್ತು ಅದು ಬೆಳೆದುಕೊಂಡು ಬರಬೇಕಾದರೆ, ಜವಾಬ್ದಾರಿಯುತವಾದ ರೀತಿಯಲ್ಲಿ, ವಿರೋಧ ಪಕ್ಷವು ಬೆಳೆದುಕೊಂಡು ಬರಬೇಕು. ಇವತ್ತಿನ ದಿವಸ ಪ್ರಜಾಪ್ರಭುತ್ವ ಬದುಕಬೇಕೆಂದು ಎಲ್ಲರೂ ಮಾತನಾಡುತ್ತಿದ್ದಾರೆ. ಅದು ಬದುಕಬೇಕಾದರೆ, ನಿಜವಾಗಿಯೂ ವಿರೋಧಪಕ್ಷವನ್ನು ಹತ್ತಿಕ್ಕುವುದರಿಂದ ಅದು ಬೆಳೆಯುವುದಿಲ್ಲ, ವಿರೋಧ ಪಕ್ಷವಿಲ್ಲವಾದರೆ, ಆಳುವ ಪಕ್ಷವನ್ನು ಕೇಳುವವರಿಲ್ಲವೆ, ಪ್ರಜಾಪ್ರಭುತ್ವ ಬದುಕಲಾರದು. ನಿಜವಾಗಿಯೂ ಆಳುವ ಪಕ್ಷದವರು ವಿರೋಧ ಪಕ್ಷದವರನ್ನು ಬೆಳೆಯಲು ಬಿಡಬೇಕು ಮತ್ತು ಅವರಿಗೆ ಸಮರ್ಪಕವಾದ ರೀತಿಯಲ್ಲಿ, ಒಂದು ಒಳ್ಳೆಯ ವಾತಾವರಣವನ್ನು ಏರ್ಪಾಡು ಮಾಡಬೇಕು. ಅವಲ್ಲದೆ ಅವರಿಗೆ ಬೇಕಾದಂತಹ ಎಲ್ಲಾ ರೀತಿಯ ಸಲಕರಣೆಗಳನ್ನು ಪೂರೈಸಿಕೊಡಬೇಕು. ಇವತ್ತಿನ ದಿವಸ ತಮ್ಮಲ್ಲಿ ನಾನಾ ರೀತಿಯ ದೋಷಗಳಿದ್ದರೂ, ಅದನ್ನು ಶುದ್ಧಗೊಳಿಸಿ, ಅಧಿಕಾರದ ಆಸೆಗೆ ಬಯಸದೆ, ಅದನ್ನು ತಿದ್ದಿಕೊಂಡು, ಎಷ್ಟು ಎಷ್ಟು ನಿಮ್ಮ ಬಾಯಿಂದ ಎಂದು ಬರುತ್ತದೋ ಎಂದು ನಾವು ಸಮಯವನ್ನು ಕಾಯುತ್ತಿದ್ದೆವು.

ಎರಡನೆ ಪ್ಯಾರಾದಲ್ಲಿ ನಮ್ಮ ಹಿರಿಯರು ಈ ರೀತಿ ಹೇಳಿದ್ದಾರೆ:

> " We are passing through strange times It is true we have placed before the House the Budget for only three or four months."

ಮೂರು-ನಾಲ್ಕು ತಿಂಗಳಿಗೆ ಮಾತ್ರ ಬಜೆಟ್‌ನ್ನು ನಮ್ಮ ಸಭೆಯಲ್ಲಿ ಇಟ್ಟಿದ್ದೇವೆಂದು ಹೇಳಿದ್ದೀರಿ. ಅದೇ ವಾಕ್ಯವನ್ನು ಹೇಳುವಾಗ, ಮೊದಲ್ಲಿನ ವಾಕ್ಯದಲ್ಲಿ ಅವರು " ನಾವು ಬಹಳ ಕಠಿಣತರವಾದ ದಿನವನ್ನು ಕಳೆಯಬೇಕೆಂದು " ಹೇಳಿದ್ದಾರೆ. ನಿಜವಾಗಿ ಕಠಿಣ ದಿನವನ್ನು ಕಳೆಯಬೇಕು. ಜನತೆಗೆ ಇದರಿಂದ ಕಷ್ಟವಿದೆ. ಜನತೆಯು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಬಹಳ ಸೂಕ್ತ ರೀತಿಯಿಂದ ನಿರೀಕ್ಷಿಸುತ್ತಿದ್ದಾರೆ. ಮದ್ರಾಸ್‌ನ ಆಡಳಿತ ಸರಿಯಾಗಿದೆಯೋ, ಕೇರಳದ ಆಡಳಿತ ಸರಿಯಾಗಿದೆಯೋ, ಮಹಾರಾಷ್ಟ್ರದ ಆಡಳಿತ ಸರಿಯಾಗಿದೆಯೋ, ಸಂಯುಕ್ತ ಪ್ರಾಂತ್ಯಗಳ ಆಡಳಿತ ಸರಿಯಾಗಿದೆಯೋ ಅಥವಾ ನಮ್ಮ ರಾಜ್ಯದ ಆಡಳಿತ ಸರಿಯಾಗಿದೆಯೋ ಎಂಬುದನ್ನೆಲ್ಲಾ ಬಹಳ ರೀತಿಯಿಂದ ವಿಮರ್ಶಿಸಿ ಜನರು ಪರೀಕ್ಷಿಸುತ್ತಿದ್ದಾರೆ. ಇವತ್ತಿನ ದಿವಸ ಹಿಂದಿನಂತಹ ಜನ, ಕಣ್ಣುಮುಚ್ಚಿಕೂಡುವವರಿಲ್ಲ. ನಾವು ಯಾವ ಯಾವ ರೀತಿಯಲ್ಲಿ ವರ್ತಿಸುತ್ತಿದ್ದೇವೆ, ಎಂಬುದನ್ನು ಪರೀಕ್ಷಿಸುತ್ತಿದ್ದಾರೆ. ಹಿಂದಿನ ಸ್ಥಿತಿಯಲ್ಲಿ ಇವತ್ತು ನಮ್ಮ ರಾಜ್ಯವಿಲ್ಲ. ಇವತ್ತಿನ ದಿವಸ ಜನತೆಯು ವಿರೋಧ ಪಕ್ಷವನ್ನು ಬಲಪಡಿಸುವುದಕ್ಕೆ ಕಾರಣ, ಆಳುವ ಪಕ್ಷ ಬಲವಾಗಿ, ಅವರು ಮಾಡುವ ಕೆಲಸಗಳಲ್ಲಿ ತಪ್ಪು ಮಾಡುವುದನ್ನು ತಪ್ಪಿಸಲು ನಮ್ಮನ್ನು ಇಲ್ಲಿಗೆ ಕಳಿಸಿದ್ದಾರೆ. ಇಂಥ ಕಠಿಣ ಕಾಲದಲ್ಲಿ ಬರುವಂತಹ ಸಮಸ್ಯೆಗಳಿಗೆ ನಾವು ಮಾಡುವಂತಹ ನಿವಾರಣೆಯಾವದರೂ ಏನು ? ಬಜೆಟ್ ಅಧಿವೇಶನ ಇನ್ನೂ ಮುಂದುವರಿಯುವುದರಿಂದ ಈ ಕಠಿಣ ಸಮಸ್ಯೆಯನ್ನು ಪರಿಹರಿಸಿದಂತಾಗುವುದೋ ? ಐದು ದಿನಗಳ ಕಾಲ ವ್ಯರ್ಥವಾಗಿ ಈ ಸಭೆಯ ಕಾಲವನ್ನು ಈ ಒಂದು ಪ್ರಶ್ನೆಗೋಸ್ಕರ ಕಳೆದರು ಎಂದು ಅನೇಕರ ಮನಸ್ಸಿನಲ್ಲಿ ಬಂದಿರಬಹುದು. ನಿಜವಾಗಿಯೂ ಈ ಐದು ದಿನಗಳ ಕಾರ್ಯಕ್ರಮವನ್ನು ಬಿಟ್ಟು ಬೇರೆ ಏನೂ ಮಹತ್ತರವಾದ ವಿಷಯ ಇಲ್ಲ ಎಂಬುದಾಗಿ ತಿಳಿದುಬಂತು. ಇವತ್ತಿನ ದಿವಸ ಆ ರೀತಿಯಾಗಬಾರದು. ದೇಶದಲ್ಲಿ ಕಠಿಣ ಪರಿಸ್ಥಿತಿ ಇರುವಾಗ, ಆ ಪರಿಸ್ಥಿತಿಯಿಂದ ಹೇಗೆ ಪಾರಾಗಬೇಕು, ಯಾವ ರೀತಿ ಮುಂದುವರಿಯಬೇಕು, ಜನರ ಕಷ್ಟಕಾರ್ಪಣ್ಯಗಳನ್ನು ಹೇಗೆ ಹೋಗಲಾಡಿಸಬೇಕು, ಮತ್ತು ಹಣ ದುರ್ವಿನಿಯೋಗ ವಾಗುವುದನ್ನು ಹೇಗೆ ತಪ್ಪಿಸಬೇಕೆಂಬುದನ್ನು ಗಮನಿಸಬೇಕೇವಿನಾ ಅದನ್ನು ಬಿಟ್ಟು ವಿರುದ್ಧ ರೀತಿಯಲ್ಲಿ ನಾವು ವರ್ತಿಸುವುದಾದರೆ, ನಿಜವಾಗಿಯೂ ಜನತೆಯ ಕಷ್ಟಕಾರ್ಪಣ್ಯಗಳನ್ನು ತಿಳಿಯದೆ, ಕೇವಲ ಜನರನ್ನು ಮುಗ್ಧಗೊಳಿಸುವುದಕ್ಕೆ ಭಾಷಣಗಳನ್ನು, ಹೇಳಿಕೆಗಳನ್ನು ಮಾಡುತ್ತಿದ್ದೇವೆಂದು ಜನರಲ್ಲಿ ಒಂದು ಅಭಿಪ್ರಾಯ ಬಂದೀತು. ನಂತರ ಅವರು ಈ ರೀತಿ ಹೇಳುತ್ತಾರೆ :

> " Therefore the fact that we have allotted in the Budget only for 3 or 4 months does not very much affect the budget of the entire year "

ಇದೊಂದು ನನಗೆ ಬಹಳ ಆಶ್ಚರ್ಯವನ್ನು ಉಂಟುಮಾಡಿದೆ. ಈಗ ಈ ಬಜೆಟ್‌ನ್ನು ಕೊಟ್ಟು ಆ ಬಜೆಟ್ ಆಧಾರದ ಮೇಲೆ ನಾಲ್ಕು ತಿಂಗಳಿಗೆ ಮಾತ್ರ ವಿನಿಯೋಗ ಮಾಡಿ ಎಂದು ಹೇಳಿದರೆ ಅದು

(ಶ್ರೀ ಕೆ. ಎಚ್. ಪಾಟೀಲ್)

ಎಷ್ಟು ಪರಿಣಾಮಕಾರಿಯಾಗುವುದು ; ನಾಲ್ಕು ತಿಂಗಳಿಗೆ ಮಾತ್ರ ಖರ್ಚು ಮಾಡೋಣ ಎಂಥು ನನ್ನಂಥವನು ಹೇಳಬಹುದು, ಆದರೆ ಬಹು ಕಾಲದ ಹಿರಿಯ ನಾಯಕರು ಹೇಳುವ ಮಾತು ಇದಲ್ಲ. ಮಾನ್ಯ ನಾಯಕರೇ ಇಂದು ನಮ್ಮ ರಾಜ್ಯದ ಎದುರಿಗೆ ಇಟ್ಟಿರುವ ನಾಲ್ಕು ತಿಂಗಳ ಇಂಟರೀಮ್ ಬಜೆಟ್‌ನಲ್ಲಿ ಹಣವನ್ನು ಈಗಾಗಲೇ ಕೊಟ್ಟಿರುವಂತೆ ಅಧಿಕಾರಿಗಳು ವಿತರಣೆ ಮಾಡಲು ತೊಡಗಿದ್ದಾರೆ.

2-30 P.M.

ಸರಕಾರಕ್ಕೆ ಇದು ಗೊತ್ತಿರಲಿಲ್ಲವೇ ? ನಾಲ್ಕು ತಿಂಗಳ ಬಜೆಟ್ಟು ಮಂಜೂರಾದ ಮೇಲೆ ಹನ್ನೆರಡು ತಿಂಗಳಿಗೆ ಅದು ಹೊಂದಾಣಿಕೆಯಾಗುವಂತೆ ಕೊಡಲಾಗುತ್ತದೆಯೇ ! ಈ ನಾಲ್ಕು ತಿಂಗಳ ಅವಧಿ ಯಲ್ಲಿ ಒಂದು ಕಾರ್ಯಕ್ಕೆ ಲಕ್ಷಾಂತರ ರೂಪಾಯಿ ಮಂಜೂರು ಮಾಡಲಾಗುವುದು. ಅದಕ್ಕೆ ಅನುಸಾರವಾಗಿ ಅಧಿಕಾರಿಗಳು ಹಣ ಖರ್ಚು ಮಾಡುತ್ತಾರೆ. ಅಂಥ ಕೆಲಸ ಅಪೂರ್ತಿಯಾಗಿ ಉಳಿಯುತ್ತದೆ. ಆಗ್ಗೆ ಏನು ಹೇಳುತ್ತೀರಿ ? ಅಪೂರ್ತಿಯಾಗಿ ಉಳಿದ ಕೆಲಸಕ್ಕೆ ಹಣ ಬೇಕೆಂದು ಮಾಗಣಿ ಮಾಡಿದಾಗ ಹಣವಿಲ್ಲದಿದ್ದರೆ ಏನು ಹೇಳುತ್ತೀರಿ ! ಕಾರ್ಯಾರಂಭ ಮಾಡಿ ಕೆಲವು ಯೋಜನೆ ತೆಗೆದುಕೊಂಡಿದ್ದೀರಿ ಎಂದು ತಿಳಿಯಿರಿ. ಒಂದನೇ ಸ್ಟೇಜ್ ಆದಮೇಲೆ ಎರಡನೇ ಸ್ಟೇಜಕ್ಕೆ ಹಣ ಕೊಡಿ ಎಂದು ಕೇಳಿದರೆ ಆಗ್ಗೆ ಏನು ಹೇಳುತ್ತೀರಿ ? ಪ್ರಾರಂಭ ಮಾಡಿದ ಕೆಲಸ ಪೂರ್ತಿ ಮಾಡಲೇ ಬೇಕಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಹಣ ಹೇಗೆ ಒದಗಿಸಬೇಕು ಎಂಬುದಕ್ಕೆ ಆಲೋಚನೆ ಮಾಡಿ ಸಭಾ ನಾಯಕರಾದ ಮಾನ್ಯ ನಿಜಲಿಂಗಪ್ಪನವರು ವಿರೋಧ ಪಕ್ಷದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪರಿಸ್ಥಿತಿ ಈ ರೀತಿ ಬಂದಿದೆ, ಬಜೆಟ್ ಮುಂದೆ ಹಾಕುವುದು ಬೇಡ ಎಂಬುದಾಗಿ ಸತ್ಯಸಂಗತಿ ನಮ್ಮ ಮುಂದೆ ಇಟ್ಟಿದ್ದರೆ ಅದನ್ನು ಪರಿಶೀಲನೆ ಮಾಡಬಹುದಾಗಿತ್ತು. ಪ್ರಾಮಾಣಿಕವಾಗಿ ವಿರೋಧ ಪಕ್ಷದ ಸದಸ್ಯರ ಮುಂದೆ ಸತ್ಯ ಸಂಗತಿ ಇಟ್ಟಿದ್ದರೆ ಸಭಾ ನಾಯಕರು ವಂದನಾರ್ಹರಾಗು ತ್ತಿದ್ದರು. ದುರ್ದೈವದಿಂದ ಆ ರೀತಿ ಆಗಲಿಲ್ಲ. ಐದು ವರ್ಷಕ್ಕೊಮ್ಮೆ ಮಹಾ ಚುನಾವಣೆ ನಡೆದ ಕಾಲಕ್ಕೆ ಈ ರೀತಿ ವೋಟ್ ಆನ ಅಕೌಂಟ್ ತೆಗೆದುಕೊಳ್ಳಬೇಕಾಗುತ್ತದೆ ಎಂದು ಅವರು ಹೇಳಿದರು. ವೋಟ್ ಆನ್ ಅಕೌಂಟು ತೆಗೆದುಕೊಳ್ಳುವುದು ಅನಿವಾರ್ಯವಾಗಿದ್ದರೆ ಕೇಂದ್ರ ಸರಕಾರದ ಸಮ್ಮತಿ ಪಡೆದು, ಪ್ಲಾನಿಂಗ್ ಕಮಿಷನ್ ಜೊತೆಗೆ ಚರ್ಚೆ ಮಾಡಿ ಇದನ್ನು ನಿರ್ಣಯ ಮಾಡಬೇಕಾಗಿತ್ತು. ಅದನ್ನು ಬಿಟ್ಟುಕೊಟ್ಟು ನಾಲ್ಕು ತಿಂಗಳ ಬಜೆಟ್ಟು ಮಂಜೂರು ಮಾಡಿಕೊಂಡಮೇಲೆ ಈಗ ಬಜೆಟ್ ತೆಗೆದುಕೊಳ್ಳುವುದು ಬೇಡ ಸೆಶನ್ ಮುಂದಕ್ಕೆ ಇಡೋಣ ಎಂದು ಹೇಳುವುದು ಸರಿಯೇ ? ಇದು ಹಿರಿಯ ನಾಯಕರಿಗೆ ಒಪ್ಪತಕ್ಕ ಮಾತೇ ? ಇದು ಸಮರ್ಪಕವಾದ ನೀತಿ ಅಲ್ಲ ಎಂದು ಹೇಳುತ್ತೇನೆ

ಮಾನ್ಯ ಸಭಾಪತಿಗಳೇ, ನಮ್ಮ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರು, ಅವರ ಸಹೋದ್ಯೋಗಿಗಳಾದ ಮಾನ್ಯ ಮಂತ್ರಿಗಳವರು ಅನೇಕ ಕಡೆ ಪ್ರವಾಸ ಮಾಡುತ್ತಾರೆ. ಇವ ರೆಲ್ಲರೂ ಬಹಳಷ್ಟು ಪ್ರವಾಸ ಮಾಡುತ್ತಾರೆ. ಪ್ರವಾಸ ಮಾಡುವ ಅವಧಿಯನ್ನು ಮೊಟಕು ಮಾಡಿ, ದಿಲ್ಲಿಗೆ ಕೂಡಲೇ ಹೋಗಿ ಮುರಾರಜಿ ದೇಸಾಯಿಯವರನ್ನು ಭೇಟಿಮಾಡಿ, ರಾಜದ ಬಜೆಟ್ಟನ್ನು ಸಭೆಯ ಮುಂದೆ ಇಟ್ಟು ಬಿಟ್ಟಿದ್ದೇವೆ, ಕೇಂದ್ರ ಸರಕಾರದಿಂದ ಎಷ್ಟು ಹಣ ನಮಗೆ ದೊರೆಯುತ್ತದೆ, ಏನು ಮಾಡಬೇಕು ಹೇಳಿರಿ ಎಂದು ಕೇಳಬೇಕಾಗಿತ್ತು. ಈ ರೀತಿ ಮಾಡಿದ್ದರೆ ಈ ಮೂರು ದಿವಸ ಗಳಲ್ಲಿ ದೇಶದ ದುಡ್ಡು ಹಾಳಾಗುತ್ತಿರಲಿಲ್ಲ. ಹಣ ದುರುಪಯೋಗವಾಗುತ್ತಿರಲಿಲ್ಲ. ಬಜೆಟ್ ಚರ್ಚೆ ಮುಂದಕ್ಕೆ ಹಾಕುವ ಯೋಚನೆ ನಡೆಯುತ್ತಿರಲಿಲ್ಲ. ಇದಕ್ಕೆ ಹೊಣೆಗಾರರು ಯಾರು ! ನಮ್ಮ ನಾಯಕರಾದ ಮಾನ್ಯ ನಿಜಲಿಂಗಪ್ಪನವರು ಎಲ್ಲ ಸದಸ್ಯರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳ ಬೇಕಾಗಿತ್ತು. ಇದರಿಂದ ಯಾರು ತಪ್ಪು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಶ್ರೀ ನಿಜ ಲಿಂಗಪ್ಪನವರೇ ತಪ್ಪುಗಾರರು ಎಂದು ನಿಸ್ಸಂದೇಹವಾಗಿ ಹೇಳುತ್ತೇನೆ.

ಮಾನ್ಯ ಸಭಾಪತಿಗಳವರೇ, ಮಾನ್ಯ ಮುಖ್ಯ ಮಂತ್ರಿಗಳೂ ಹಿರಿಯ ನಾಯಕರೂ ಆದ ನಿಜಲಿಂಗಪ್ಪನವರ ಅವಗಾಹನೆಗೆ ಒಂದು ಸಮಸ್ಯೆಯನ್ನು ಈ ಸಮಯದಲ್ಲಿ ಅವರ ಮುಂದೆ ಇಡು ತ್ತೇನೆ. ಈಗಲಾದರೂ ಸಹ ಅವರು ಇನ್ನೊಮ್ಮೆ ವಿಚಾರ ಮಾಡಿ ಏನು ಮಾಡಬೇಕು ಎಂಬುದನ್ನು ಗೊತ್ತು ಮಾಡಿ ಅದರಂತೆ ಮಾಡಲಿ. ಅವರು ಗದಗ ನಗರಕ್ಕೆ ಬಂದಿದ್ದರು. ನಾನು ಅವರಿಗೆ ಒಂದು ವಿವರವಾದ ಪತ್ರ ಸಹ ಬರೆದಿದ್ದೇನೆ. ಅವರಿಗೆ ಎಲ್ಲವನ್ನೂ ಹೇಳಿದ್ದೇನೆ. ಜನತೆಯ ಹಿತದೃಷ್ಟಿಯಿಂದ ಅಪೂರ್ತಿಯಾಗಿರತಕ್ಕ ಕೆಲಸಗಳನ್ನು ಪೂರ್ತಿ ಮಾಡಬೇಕಾಗಿರುವ ಬಗ್ಗೆ ಒಂದು ಪಟ್ಟಿ ಮಾಡಿ ಕೊಟ್ಟಿದ್ದೇನೆ. ಅಂಥ ಕೆಲಸಗಳನ್ನು ಪೂರ್ತಿಮಾಡಿ ಎಂದು ಹೇಳಿದ್ದೇನೆ. ಗದಗಿನಲ್ಲಿ

ಇರತಕ್ಕ ಸ್ಲಮ್ ಏರಿಯಾ ಅಸಾಧಾರಣವಾದ ದೃಶ್ಯವನ್ನು ಅವರು ಅಲ್ಲಿಗೆ ಬಂದಾಗ್ಗೆ ನೋಡಿರಬಹುದು. ಅವರು ನೋಡಿರದಿದ್ದರೆ ಅಲ್ಲಿಗೆ ಇನ್ನೊಮ್ಮೆ ಬಂದಾಗ್ಗೆ ನೋಡಲಿ. ರಾಜ್ಯದ ಅಗತ್ಯವಾಗಿ ಮಾಡಬೇಕಾದ ಕೆಲಸಗಳು ಅನೇಕ ಇವೆ. ನಾವು ಇದುವರೆಗೆ ಸಾಧನೆ ಮಾಡಿರುವ ಪ್ರಗತಿಯನ್ನು ಮುಂದುವರಿಸೋಣ. ಈ ಸಲಹೆ ನಾನು ಪತ್ರ ಮುಖೇನ ಅವರಿಗೆ ತಿಳಿಸಿದ್ದೇನೆ. ನಾನು ಬರೆದ ಈ ಪತ್ರ ಅವರಿಗೆ ತಲುಪಿದೆಯೋ ಇಲ್ಲವೋ ಗೊತ್ತಿಲ್ಲ. ಯಾಕೆಂದರೆ ಪತ್ರ ತಲುಪಿದ್ದಕ್ಕೆ ಅಕ್ನಾಲೆಜ್‌ಮೆಂಟ್ ಕಳಿಸುವ ಪದ್ಧತಿ ಇದೆಯೋ ಇಲ್ಲವೋ ಗೊತ್ತಿಲ್ಲ. ಇದಲ್ಲದೆ ಇನ್ನೊಂದು ವಿಚಿತ್ರ ಪದ್ಧತಿ ಇದೆ. ಅದೇನೆಂದರೆ, ಮಂತ್ರಿಗಳು ಟೂರ್ ಮೇಲೆ ಬರತಕ್ಕ ಟೂರ್ ಪ್ರೋಗ್ರಾಂ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಬರುತ್ತದೆ. ಆದರೆ ವಿರೋಧ ಪಕ್ಷದ ಸದಸ್ಯರಿಗೆ ಅವರ ಟೂರ್ ಪ್ರೋಗ್ರಾಂ ಬರುವುದಿಲ್ಲ. ಆದುದರಿಂದ ಮಂತ್ರಿಗಳು ಎಲ್ಲಿ ಇರುತ್ತಾರೆ ಎಲ್ಲಿಗೆ ಹೋಗುತ್ತಾರೆ ಎಂಬುದು ವಿರೋಧ ಪಕ್ಷದ ಸದಸ್ಯರಿಗೆ ಗೊತ್ತಾಗುವುದಿಲ್ಲ. ಮೊನ್ನೆ ಮುಖ್ಯ ಮಂತ್ರಿಗಳು ಗದಗಿಗೆ ಬಂದಾಗ್ಗೆ ಅವರು ಸ್ವಂತ ಖರ್ಚಿನಲ್ಲಿ ಖಾಸಗಿ ಕೆಲಸಕ್ಕೆ ಬಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೆನು. ಆದರೆ ಅವರು ಟೂರ್ ಮೇಲೆ ಸರಕಾರದ ಖರ್ಚಿನಲ್ಲಿಯೇ ಬರುತ್ತಾರೆ, ಸರಕಾರಿ ಕಾರಿನಲ್ಲಿಯೇ ಹೋಗುತ್ತಾರೆ. ಅವರು ಟೂರ್ ಮೇಲೆ ಹೋಗತಕ್ಕ ಸ್ಥಳದಲ್ಲಿ ಯಾವ ಯಾವ ಕೆಲಸಗಳು ಆಗಬೇಕಾಗಿದೆ, ಯಾವ ಯಾವ ಸ್ಥಳಕ್ಕೆ ಭೇಟಿ ಕೊಡಬೇಕು ಎಂಬುದನ್ನು ಆಲೋಚನೆ ಮಾಡಿ ಗೊತ್ತು ಮಾಡಿಕೊಂಡು ಬರಬೇಕು. ಕರ್ನಾಟಕದ ಹಿತದೃಷ್ಟಿಯಿಂದ ಯಾವ ಕೆಲಸ ಆಗಬೇಕಾಗಿದೆ ಎಂಬುದನ್ನು ಪರ್ಯಾಲೋಚನೆ ಮಾಡಬೇಕು. ಒಳ್ಳೆಯ ಕೆಲಸಕ್ಕೆ ಸರಕಾರದವರಿಗೆ ಹಣ ಬೇಕಾದರೆ ಅಂಥ ಹಣ ಜನ ಕೊಡುತ್ತಾರೆ. ಆದುದರಿಂದ ಕೇಂದ್ರ ಸರಕಾರ ಮತ್ತು ಪ್ಲಾನಿಂಗ್ ಕಮಿಷನ್ ಜೊತೆಗೆ ಸಮಾಲೋಚನೆ ನಡೆಸಿ ಅಗತ್ಯವಾದ ಕೆಲಸಗಳ ಬಗ್ಗೆ ಪರ್ಯಾಲೋಚನೆ ನಡೆಸಬೇಕು. ಸಾಧಾರಣವಾಗಿ ಸಣ್ಣ ಸಣ್ಣ ಕೆಲಸಗಳಿಗೆ ಮಂತ್ರಿಗಳು ಟೂರ್ ಮೇಲೆ ಹೋಗುತ್ತಾರೆ. ಆ ರೀತಿ ಮಾಡದೆ ಮಹತ್ವದ ಕೆಲಸಗಳ ಬಗ್ಗೆ ಅಗತ್ಯವಾಗಿ ಆಗಬೇಕಾದ ಕೆಲಸಗಳ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ಈ ಮೂಲಕ ಅವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮೊನ್ನೆ ಒಂದು ದವಾಖಾನೆಯನ್ನು ಟ್ರಾನ್ಸ್‌ಫರ್ ಮಾಡಿಕೊಡುವುದಕ್ಕೆ ಸಂಬಂಧಪಟ್ಟ ಕೆಲಸಕ್ಕೆ ಗದಗ ತಾಲ್ಲೂಕಿಗೆ ಮಾನ್ಯ ಮಂತ್ರಿಗಳು ಟೂರ್ ಮೇಲೆ ಬಂದಿದ್ದರು. ಟೂರ್ ಪ್ರೋಗ್ರಾಂ ನನಗೆ ಬಂದಿರಲಿಲ್ಲವಾದ್ದರಿಂದ ಅವರು ಬರುವುದು ನನಗೆ ತಿಳಿಯಲಿಲ್ಲ. ದವಾಖಾನೆಯನ್ನು ಅವರು ಕೊಡಲಿ, ಇವರು ತೆಗೆದುಕೊಳ್ಳಲಿ. ಆದರೆ ಇದಕ್ಕಾಗಿ ದೇಶದ ದುಡ್ಡು, ರಾಜ್ಯದ ದುಡ್ಡು ಹಾಳು ಮಾಡುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ತೆಗೆದುಕೊಳ್ಳಬಾರದಾಗಿತ್ತೇನು ?

ಶ್ರೀ ಕೆ. ಎಚ್. ಪಾಟೀಲ್.—ಈ ಪ್ರಸಂಗಕ್ಕಾಗಿ ಇಷ್ಟೊಂದು ದುಡ್ಡನ್ನು ಹಾಳು ಮಾಡಬಾರದಾಗಿತ್ತು. ಒಂದು ಪ್ರಸಂಗಕ್ಕಾಗಿ ಪ್ರವಾಸ ಹೋದಾಗ ಅಲ್ಲಿರುವ ಉಳಿದ ಸಮಸ್ಯೆಗಳನ್ನೂ ವಿಚಾರ ಮಾಡಿಕೊಂಡು ಬರುವುದು ಉತ್ತಮ.

Sri K. PUTTASWAMY.—By his talk I get an impression that I went only for that purpose and I did not attend to any other work. For the information of the Hon'ble member, I may say, I had some other work and I could not go there. The Hon'ble Chief Minister who was there at that time, represented me.

Sri K. H. PATIL.—He has misunderstood me. ಯಾವುದಾದರೂ ಒಂದು ಕೆಲಸಕ್ಕೆ ಹೋದಾಗ ಉಳಿದ ಕೆಲಸಗಳನ್ನೂ ಮಾಡಿರಿ ಎಂದು ಹೇಳುತ್ತಿದ್ದೇನೆ.

ಮಾನ್ಯ ಹಿರಿಯರಾದ ನಿಜಲಿಂಗಪ್ಪನವರು ಮತ್ತು ಇತರರು ಮುಂದಾದರೂ ಸಹ ಕಾನ್‌ಸ್ಟಿಟ್ಯುಯೆನ್ಸಿಗಳಲ್ಲಿ ಪ್ರವಾಸ ಮಾಡುವಾಗ ಅನೇಕ ಕೆಲಸಗಳು ಇದ್ದುದನ್ನೂ ನೋಡಿಕೊಂಡು ಕೆಲಸ ಮಾಡಿಕೊಂಡು ಬರಬೇಕು, ವಿರೋಧ ಪಕ್ಷದವರು ಹೇಳಿದ ಕೆಲಸ ಎಂದು ವಿರೋಧ ಮಾಡುವ ರೀತಿಯಲ್ಲಿ ನೋಡಬಾರದು. ಅವರಿಗೆ ಸುದೈವದಿಂದ ಪ್ರವಾಸ ಮಾಡುವ ಅವಕಾಶ ಯಾವಾಗ ಬರುತ್ತದೆ ಆವಾಗ ಜನತೆಗೆ ಸಹಾಯವಾಗುವ ಕೆಲಸಗಳನ್ನು ಮಾಡಬೇಕು. ಆ ಕೆಲಸಗಳನ್ನು ವ್ಯಕ್ತಿಗಳಿಗಾಗಿ ಮಾಡುವಂಥದ್ದಲ್ಲ. ಅವು ಜನತೆಗಾಗಿ ಮಾಡುವಂಥ ಕೆಲಸಗಳು; ಜನತೆಯ ಕಲ್ಯಾಣ ಮಾಡುವಂಥ ಕೆಲಸಗಳು. ಸರ್ಕಾರದವರು ಈ ಕಾರ್ಯದ ಕಡೆಗೆ ಗಮನ ಕೊಡಬೇಕೆಂದು ನಮ್ರ ಪೂರ್ವಕವಾಗಿ ಸಲಹೆ ಮಾಡಬಯಸುತ್ತೇನೆ.

(SRI K. H. PATIL)

ಪ್ರಾಮುಖ್ಯವಾಗಿ ಮಾನ್ಯ ನಿಜಲಿಂಗಪ್ಪನವರು ಹೀಗೆ ಹೇಳಿದ್ದಾರೆ :

"Why I made a particular request to you to postpone the financial aspect of the budget was merely this. As I said we are passing through critical times. As we all know Mysore has to face a lot of difficulties."

ಇಷ್ಟು ಹೊತ್ತಿನ ತನಕ ನಾನು ಹೇಳಿದೆ ಸ್ವಾಮಿ ; ಮೈಸೂರು ಬಹಳ ಕಷ್ಟವನ್ನು ಪಡೆಯುವುದಕ್ಕೆ ಹತ್ತಿದೆ ಎಂದು, ನಮ್ಮ ನಾಯಕರೂ ಅದನ್ನೇ ಹೇಳುತ್ತಾರೆ. ನಮ್ಮ ಮೈಸೂರು ರಾಜ್ಯದಲ್ಲಿ ನೈಸರ್ಗಿಕವಾದ ಸಂಪತ್ತು ಸಾಕಷ್ಟಿದೆ, ಒಳ್ಳೆಯ ವಾತಾವರಣವಿದೆ, ಮಿಗಿಲಾಗಿ ದೇವರ ಅನುಗ್ರಹ ನಮಗೆ ಇದೆ. ಆದರೆ ನಮಗೆ ಇರುವ ಕೊರತೆ ಎಂದರೆ, ರಾಜ್ಯ ಸರ್ಕಾರದಿಂದ ಜನತೆಗೆ ನೇರವಾಗಿ, ನಿಷ್ಪಕ್ಷಪಾತವಾಗಿ ದೊರೆಯಬೇಕಾದಂಥ ಸೌಕರ್ಯಗಳು ಸಾಕಷ್ಟು ಸಿಕ್ಕುತ್ತಿಲ್ಲ. ಅಂಕಿ ಸಂಖ್ಯೆಗಳ ಮೇಲಿಂದ ಇಷ್ಟು ಹಣ ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಬಹು ಭಾಗದ ಹಣ ತಮ್ಮನ್ನು ಅನುಸರಿಸುತ್ತಿರುವವರಿಗೆ, ಅನುಯಾಯಿಗಳಿಗೆ ಅನುಚಿತವಾದ ರೀತಿಯಲ್ಲಿ ದೊರೆತು ಸಮಾಜಕ್ಕೆ ಸಮರ್ಪಕವಾದ ರೀತಿಯಲ್ಲಿ ಸಹಾಯವಾಗುತ್ತಿಲ್ಲ. ಅವರು ಜನತೆಗೆ ಸಹಾಯ ಮಾಡುವುದೇ ಆಗಿದ್ದರೆ ಎಲ್ಲವನ್ನೂ ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳುವಂಥ ಸರ್ಕಾರ ಇಲ್ಲಿಯವರೆಗೂ ಸಹ ರಾಜ್ಯದಲ್ಲಿರುವ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಹಂಚಿಕೆಯನ್ನು ರಾಷ್ಟ್ರೀಕರಣ ಮಾಡದೆ ಇರುತ್ತಿದ್ದಿಲ್ಲ. ಅನೇಕ ಕಡೆಗಳಲ್ಲಿ ಇನ್ನೂ ತನಕ ಪ್ರೈವೇಟ್ ಏಜೆನ್ಸಿಗೆ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಹಂಚಿಕೆಯನ್ನು ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿ ಲೈಸೆನ್ಸ್‌ದಾರರು ಎಷ್ಟು ಅನ್ಯಾಯಗಳನ್ನು ಮಾಡಿದರೂ ಸಹ ಅವರಿಗೆ ಪುರಸ್ಕಾರವಾದ ರೀತಿಯಿಂದ, ಪುಷ್ಟಿಕರವಾದ ರೀತಿಯಿಂದ ನಮ್ಮ ರಾಜ್ಯಸರ್ಕಾರದಿಂದ ಸಹಾಯ ದೊರೆಯುತ್ತಿದೆ. ಯಾವುದಾದರೂ ನಗರ ಸಭೆಯಲ್ಲಿ ತಮಗೆ ವಿರೋಧವಿದೆ ಎಂದು ಕಂಡುಬಂದರೆ ಅದನ್ನು ಸೂಪರಸೀಡ್ ಮಾಡುವಂಥ ಮನೋಭಾವನೆ ಇದೆ. ತಮ್ಮ ಕೈಯ್ಯಲ್ಲಿ ಅಧಿಕಾರವಿದೆ, ಎಲ್ಲರನ್ನೂ ಬೇಕಾದ ರೀತಿಯಿಂದ ನಡೆಸಿಕೊಳ್ಳಬಹುದು ಎನ್ನುವ ಮನೋಭಾವನೆಯಿದೆ. ಪ್ರಜಾಪ್ರಭುತ್ವದ ಹೆಸರಿನಿಂದ ಅಧಿಕಾರವನ್ನು ಪಡೆದ ನೀವು ಪ್ರಜಾಪ್ರಭುತ್ವ ರೀತಿಯಿಂದ ಅಧಿಕಾರದಲ್ಲಿ ಉಳಿದಿರುವ ನೀವು ಪ್ರಜಾಪ್ರಭುತ್ವದ ಹೆಸರಿನಿಂದ ಅಧಿಕಾರವನ್ನು ಸಾಗಿಸಿಕೊಂಡು ಹೋಗುವಂಥ ನೀವು ಇಂದು ಕೇವಲ ಬಹುಮತವಿದೆ ಪಕ್ಷದ ಬಲದಿಂದ, ಪಕ್ಷದ ಶಿಸ್ತಿನ ಪ್ರಯೋಗದಿಂದ ಪ್ರಜಾಪ್ರಭುತ್ವವನ್ನು ಬೇಕಾದ ರೀತಿಯಿಂದ ನಡೆಸುತ್ತೇವೆ, ವಿರೋಧಪಕ್ಷದವರನ್ನು, ಎದುರು ಮಾತನಾಡುವಂಥ ಜನತೆಯನ್ನು ಹತ್ತಿಕ್ಕುತ್ತೇವೆ ಎನ್ನುವಂಥ ರೀತಿಯಲ್ಲಿ ಕೆಲಸ ಮಾಡಿದರೆ ಬಹುಕಾಲ ಈ ಅಧಿಕಾರ ನಡೆಯಲಾರದು. ನಮ್ಮನ್ನು ಅನೇಕ ದಿವಸಗಳವರೆಗೆ ಹತ್ತಿಕ್ಕಲಾರಿರಿ. ಬೇಕಾದವರನ್ನು ಬೇಕಾದ ರೀತಿಯಿಂದ ನಡೆಯುವವರನ್ನು ಇಟ್ಟುಕೊಳ್ಳುತ್ತೀರಿ. ಬೇಕಿಲ್ಲದವರನ್ನು ನಿಮ್ಮ ಮಾತು ಕೇಳದಂಥ ಮುನಿಸಿಪಾಲಿಟಿಯವರನ್ನು ಕೂಡಲೇ ಸಸ್ಪೆಂಡ್ ಮಾಡಬಲ್ಲಿರಿ. ಬೆಂಗಳೂರು ಕಾರ್ಪೊರೇಷನ್ ಆರ್ಡರ್ ಬಗ್ಗೆ ಹೈಕೋರ್ಟ್ ನೀಡಿರುವ ತೀರ್ಪು ಸರ್ಕಾರ ರಾಜೀನಾಮೆ ಕೊಡಲು ಸಾಕಷ್ಟು ಆಗಿಲ್ಲವೇ ಸ್ವಾಮಿ? ನಿಜವಾಗಿ ಅವರ ಪ್ರಾಮಾಣಿಕ ಆಡಳಿತಗಾರರಾಗಿದ್ದರೆ ರಾಜಿನಾಮೆ ಕೊಡಬೇಕಾಗಿತ್ತು. ಮಾನ್ಯ ನಿಜಲಿಂಗಪ್ಪನವರ ಸ್ಥಾನದಲ್ಲಿ ನಾನು ಇದ್ದಿದ್ದರೆ ಹೈಕೋರ್ಟ್ ತೀರ್ಪು ಬಂದ ತಕ್ಷಣ ರಾಜಿನಾಮೆ ಕೊಡುತ್ತಿದ್ದೆ. ರಾಜಿನಾಮೆ ಕೊಟ್ಟು ನಮಗೆ ಅವಕಾಶ ಕೊಡಬೇಕೆಂದು ಕೇಳುವುದಿಲ್ಲ. ಧಡುಂಶಾಹಿಯಿಂದ, ಬಲಾತ್ಕಾರದಿಂದ ಅಧಿಕಾರಕ್ಕೆ ಬರಬೇಕೆಂಬ ಯೋಚನೆ ಇಲ್ಲ. ನಮಗೆ, ವಿರೋಧ ಪಕ್ಷದಲ್ಲಿ, ಅಧಿಕಾರಬೇಕೆಂಬ ಹಂಬಲವಿಲ್ಲ. ಜನತೆಯ ಕಲ್ಯಾಣ ಆಗಬೇಕೆಂಬುದೆ ನಮ್ಮ ಹಂಬಲ. ಅದು ನಿಮ್ಮ ಕೈಯಲ್ಲಿಯೇ ಆದರೆ ಸಂತೋಷ. ಇಲ್ಲದ ಹೊಣೆಗಾರಿಕೆಯನ್ನು ತಲೆಯ ಮೇಲೆ ಹೊರಿಸಿಕೊಂಡು, ವಿಶಿಷ್ಟವಾದ ರೀತಿಯಲ್ಲಿ ಅಧಿಕಾರವನ್ನು ಪಡೆಯಬೇಕೆಂಬ ಆಕಾಂಕ್ಷೆ ನಮಗೆ ಇಲ್ಲ. ಆದರೆ ನೀವಾಗಿ ಅಧಿಕಾರವನ್ನು ತ್ಯಾಗಮಾಡುವಂಥ ಕಾಲ ಬಂದರೆ ನಾವು ಆಳುವುದಕ್ಕೆ ಸಿದ್ಧವಾಗಿದ್ದೇವೆ ಎಂದು ಹೇಳುತ್ತೇನೆ.

ಸ್ವಾಮಿ, ಸಭಾಪತಿಗಳೇ, ಜನತೆಯ ಸಹಕಾರ ಬೇಡವೇ! ಜನತೆ ತನ್ನ ಸಹಕಾರ ಕೊಡುವುದಕ್ಕೆ ಸಿದ್ಧವಾಗಿದೆ. ಪ್ಲಾನಿಂಗ್ ಕಮಿಷನ್‌ನವರು ಅಥವಾ ರಾಷ್ಟ್ರದವರು ಅಥವಾ ಕೇಂದ್ರ ಸರ್ಕಾರದವರು ಕೊಡತಕ್ಕ ಹಣ ಅಥವಾ ನಮ್ಮ ಸಂಪನ್ಮೂಲಗಳು ಇವೆರಡರಿಂದಲೇ ರಾಜ್ಯಭಾರವನ್ನು ನಡೆಸುವುದು ಸಾಧ್ಯವೇ ಎಂದು ನಾನು ಬಹು ನಮ್ರ ರೀತಿಯಿಂದ ನಮ್ಮ ನಾಯಕರಲ್ಲಿ ಬಿನ್ನಹ ಮಾಡುತ್ತೇನೆ. ಜನತೆಯ ಸಹಕಾರ ಬೇಕು, ಜನತೆಯ ಸಹಾಯಬೇಕು. ದೇಶಕ್ಕೆ ಕಷ್ಟಕರವಾದ ಕಾಲ ಬಂದಾಗ,

ಚೈನಾ ಆಕ್ರಮಣ, ಪಾಕಿಸ್ತಾನದ ಗಂಡಾಂತರ ಬಂದಾಗ ನಮ್ಮ ಎದುರಿಗೆ ಬಂದು ನಮಗೆ ಸಹಾಯ ಮಾಡಿ, ನಮಗೆ ಸಹಕಾರ ಕೊಡಿ ಎಂದು ಕೇಳಿದಾಗ ಮೂಕ ಹಸುವಿನಂತೆ ಸಹಾಯ ಮಾಡಿದ್ದನ್ನು ಮರೆತಿರಾ? ಜನತೆಯು ಮಾಡಿರುವ ಸಹಾಯದ ನೆನಪು ನಿಮಗೆ ಇರಲಿಕ್ಕಿಲ್ಲ. ಆದರೆ ಜನತೆ ಮಾತ್ರ ಅದನ್ನು ಮರೆಯುವುದು ಸಾಧ್ಯವಿಲ್ಲ. ಮರೆಯಲಾರದಂಥ ಪ್ರಸಂಗಗಳು ಅವು. ತಾವು ಅನೇಕ ಜನರನ್ನು ಕಾಡಬಲ್ಲಿರಿ, ಕಾಡುವಂಥ ಶಕ್ತಿ ನಿಮಗೆ ಇದೆ, ನಿಮ್ಮಲ್ಲಿ ಅಧಿಕಾರವಿದೆ, ನಿಮಗೆ ಅಧಿಕಾರ ಬಲವಿದೆ. ನಿಮ್ಮ ವಿರೋಧಿಗಳನ್ನು ಹತ್ತಿಕ್ಕಬಲ್ಲಿರಿ, ವಿರೋಧಿ ಸಂಸ್ಥೆಗಳನ್ನು ಹಾಳು ಮಾಡಬಲ್ಲಿರಿ ಎಂದು ತಿಳಿದುಕೊಂಡಿರಬಹುದು. ಆದರೆ ವಿರೋಧಿಗಳು ಹಾಳಾಗುವುದಿಲ್ಲ, ನಿಮ್ಮ ಹೆಸರು ಹಾಳಾಗುತ್ತದೆ ಇತಿಹಾಸದಲ್ಲಿ. ಜನತೆಯ ಕಲ್ಯಾಣ ಹಾಳಾಗುತ್ತದೆ ರಾಜ್ಯದಲ್ಲಿ. ಮೈಸೂರು ರಾಜ್ಯ ನಮಗೆ ಬೇಡ, ಬೇರೆ ರಾಜ್ಯಕ್ಕೆ ಹೋಗೋಣ ಎನ್ನುವಷ್ಟರಮಟ್ಟಿಗೆ ಜನತೆಯ ಮನಸ್ಸು ವ್ಯಾಕುಲತೆಯಿಂದ ಇರುತ್ತದೆ.

Mr. CHAIRMAN.—There are very many serious points made by the Chief Minister in his statement. The hon'ble Member may better confine himself to them because all the other things could be said on the Budget Estimates when they come for discussion.

ಶ್ರೀ ಕೆ. ಎಚ್. ಪಾಟೀಲ್.—ಸನ್ಮಾನ್ಯ ಸಭಾಪತಿಯವರೇ ಈವರೆಗೆ ನನಗೆ ತಿಳಿದಂತೆ ನಾನು ಮುಖ್ಯ ಮಂತ್ರಿಗಳು ಮಾಡಿದ ಸ್ಟೇಟ್‌ಮೆಂಟಿಗೆ ಸಂಬಂಧಪಟ್ಟ ವಿಚಾರವಲ್ಲದೆ ಬೇರೆ ಏನನ್ನೂ ಹೇಳಿಲ್ಲ. ಈ ಸ್ಟೇಟ್‌ಮೆಂಟ್ ವಿಚಾರಮಾಡುವುದೆಂದರೆ, ಇದನ್ನು ಓದುವುದು ಮಾತ್ರ ಎಂದು ಅರ್ಥವಾಗುವುದಿಲ್ಲ, ಅವರ ಹೇಳಿಕೆ ಸರಿಯೇ, ಅಲ್ಲವೇ ಎಂಬುದನ್ನು ವಿಚಾರಮಾಡುವಾಗ ಅದರ ಹಿನ್ನೆಲೆ, ರೀತಿನೀತಿ ಮುಂತಾದ್ದೆಲ್ಲವನ್ನೂ ಗಮನಿಸಿ ಅದನ್ನು ಸಭೆಯ ಮುಂದೆ ಇಡಬೇಕಾದ್ದು ಅವಶ್ಯಕ, ಆದರೂ ಸಹ ಮಾನ್ಯ ಅಧ್ಯಕ್ಷರು ಹೇಳಿದಂತೆ ನನ್ನ ಭಾಷಣವು ಮಿತಿ ಮೀರದಂತೆ ಹತೋಟಿ ಮೀರಿ ಹೋಗದಂತೆ ನಾನು ನಡೆದುಕೊಳ್ಳುವೆನು. ನಾನು ಭಾಷಣಮಾಡುವಾಗ ಒಂದೊಂದು ವಾಕ್ಯವನ್ನು ನಡುವೆ ಹೇಳಿ ಆ ವಾಕ್ಯದ ಹಿನ್ನೆಲೆ, ರೀತಿನೀತಿ ವಿವರಿಸುತ್ತೇನೆ.

> "I have been discussing with the Central Government and the Planning Commission .."

ಈ ಸ್ಟೇಟ್‌ಮೆಂಟ್ ನೋಡಿದಾಗ ನನಗೆ ಅತೀವ ಸಂತೋಷವಾಯಿತು. ಏಕೆಂದರೆ, ಕೇಂದ್ರ ಸರಕಾರದೊಡನೆ ನಮ್ಮ ನಾಯಕರು ವಿಚಾರಮಾಡಲಿಕ್ಕೆ ಹತ್ತಿದ್ದಾರೆ. ಆ ರೀತಿ ವಿಚಾರಮಾಡುವ ವಿಷಯದಲ್ಲಿ ಅವರು ಹೀಗೆ ಹೇಳಿದ್ದಾರೆ:

> "that regarding being had to the peculiar situation in Mysore and its difficulties, the fact that it is one of the poorest States, more help should come to us"

ಬಜೆಟ್ಟನ್ನು ಮಂಡಿಸುವಾಗ ನಮಗೆ ಹಣ ಎಷ್ಟು ಸಿಕ್ಕುತ್ತದೆಂದು ಹೇಳಿ ನಂತರ ಸಿಕ್ಕುವುದಿಲ್ಲ ಎಂದು ಹೇಳಿದ್ದಾರೆ. ಬಜೆಟ್ಟನ್ನು ಸಭೆ ಮುಂದಿಡುವಾಗ ಒಂದು ರೀತಿಯಲ್ಲಿ ತಿಳುವಳಿಕೆ ಕೊಟ್ಟು ಮತ್ತೆ ಅದನ್ನು ಈ ರೀತಿ ಬದಲಾಯಿಸುವುದಾಗಿ ಹೇಳುವುದು ಸರಿಯೇ? ಇದನ್ನು ನಂಬುವುದು ಹೇಗೆ? ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದವರು ವಿಚಾರಮಾಡಿ ಒಂದು ತಿಳುವಳಿಕೆ ಜನತೆಗೆ ಕೊಡುವುದು ಸ್ವಾಭಾವಿಕ. ಹಾಗೆ ಮಾಡಿದಮೇಲೆ ಮತ್ತೆ ಮೊದಲು ಅಂದಾಜುಮಾಡಿದಷ್ಟು ಹಣ ದೊರೆಯುವ ವಿಚಾರದಲ್ಲಿ ಅನುಮಾನವಿರುವ ಹಾಗೆ ನಾಯಕರು ತಿಳಿಸಿದ್ದಾರೆ. ಹೀಗೆ ಮಾಡುವುದರಿಂದ ಹಾನಿಯಾಗಬಹುದು. ಮೊದಲು ಕೇಂದ್ರ ಸರಕಾರದಿಂದ ಇಷ್ಟು ಸಹಾಯ ದೊರೆಯಬಹುದು, ಜನತೆಗೆ ಬೇಕಾದ ಕಾರ್ಯಮಾಡಲು ಅನುಕೂಲವಾಗುತ್ತದೆ, ಇಂಥ ಬಾಬಿಗೆ ಇಷ್ಟು ಹಣ ದೊರೆಯುತ್ತದೆ ಎಂದು ಸಭೆಗೆ ತಿಳಿಸಿ ನಂತರ ಈಗ ಹಣ ದೊರೆಯುವ ವಿಚಾರದಲ್ಲಿ ಅನುಮಾನ ವ್ಯಕ್ತಪಡಿಸುವುದು ಸರಿಯಾಗಿ ಕಾಣುವುದಿಲ್ಲ. ಹೀಗಾದರೆ ಜನರ ಹಿತ ಹೇಗೆ ಸಾಧಿಸಿದಂತಾಗುತ್ತದೆ!

> "It looks to me that after the new Government came in the Centre we are not going to get as much as we expected when this budget was presented."

ಸ್ವಾಮಿ ಸಭಾಪತಿಯವರೇ, ಈ ಹೇಳಿಕೆಗಿಂತ ಸತ್ಯಕ್ಕೆ ದೂರವಾದ ಹೇಳಿಕೆ ಇನ್ನೊಂದಿದೆಯೇ? ಹೊಸ ಸರಕಾರ ಬಂದಮೇಲ ಹಣ ಸಿಕ್ಕಿಲ್ಲ ಎಂದು ಹೇಳಿದ್ದಾರೆ. ಮಾನ್ಯ ರಾಮಕೃಷ್ಣ ಹೆಗ್ಗಡೆಯ

(ಶ್ರೀ ಕೆ. ಎಚ್. ಪಾಟೀಲ್)

ವರು ಬಜೆಟ್ಟನ್ನು ನಮ್ಮ ಮುಂದಿಟ್ಟಾಗ ಕೇಂದ್ರದಲ್ಲಿ ಯಾವ ಸರಕಾರವಿತ್ತು, ಇಂದು ಯಾವ ಸರಕಾರವಿದೆ? ಅಂದೂ ಕಾಂಗ್ರೆಸ್ ಸರಕಾರವಿತ್ತು, ಇಂದೂ ಅದೇ ಇದೆ, ಕೇವಲ ಕೆಲವರ ಮಂತ್ರಿಗಳ ಬದಲಾವಣೆಯಾಗಿರಬಹುದು. ಮುರಾರ್ಜಿಯವರು ಅರ್ಥಿಕ ಮಂತ್ರಿಗಳಾದುದರಿಂದ ಹೀಗಾಗಿದೆ ಎಂದು ಅಭಿಪ್ರಾಯಪಡುವರೇ ಎಂದರೆ ಆ ಸಂಬಂಧವಲ್ಲಿ ನಮ್ಮ ಅರ್ಥಿಕ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಓದುವುದಕ್ಕೆ ಬಹಳ ಸಂತೋಷವಾಗುತ್ತದೆ. ಅದು ಹೀಗಿದೆ :

> "I have no doubt that the present Union Finance Minister who is an elder statesman with rich experience will give necessary guidance and evolve a suitable working arrangement so that the country's economy may be reoriented and set on sound lines which would lead to stability and prosperity."

ಮಾರ್ಚಿ 24 ರಲ್ಲಿ ಬಜೆಟ್ ಭಾಷಣ ಮಾಡಿದಾಗ ಮುರಾರ್ಜಿಯವರು ದೂರವಿದ್ದರು. ಹಾಗಿರುವಾಗ ನಮ್ಮ ಸಭಾ ನಾಯಕರು ಹೇಳಿರುವುದು ನಿಜವಾಗಿಯೂ ವಿಚಿತ್ರವಾಗಿದೆ :

> "I am anxious as to how we can meet the different commitments of different departments in the years to come."

ಎಂದು ಹೇಳಿರುವುದು ಸರಿಯಲ್ಲ. ಬಜೆಟ್ ಮಂಡಿಸಿದಾಗ ಇದ್ದ ಧೋರಣೆ ಮತ್ತು ನಂತರದ ಸನ್ನಿವೇಶಗಳನ್ನು ಗಮನಿಸಿದರೆ ನಮ್ಮ ಹಣದ ಕೊರತೆ ಕಡಮೆಯಾಗಬಹುದು ಎಂಬ ಭಾವನೆಯಿತ್ತು. ಆದರೆ ಈಗ ಹಾಗಿಲ್ಲ. ಬಜೆಟ್ ಮಂಡಿಸಿದಾಗ ಇದ್ದ ಸರಕಾರ ಈಗಿಲ್ಲ ಎಂದು ಹೇಳುತ್ತಿರಬಹುದು. ಅವರು ಹಿಂದೆ ಭಾಷಣ ಮಾಡುವಾಗ ಮತ್ತೊಂದು ಸರಕಾರ ಬರುತ್ತದೆ ಎಂಬ ಭಾವನೆ ಇದ್ದರೆ ಈ ರೀತಿ ಹೇಳುತ್ತಿರಲಿಲ್ಲ. ಹಿರಿಯರಾದ ನಿಜಲಿಂಗಪ್ಪನವರಿಗೆ ನಿಜವಾಗಿಯೂ ಕೇಂದ್ರದಲ್ಲಿ ಇಂದಲ್ಲ ನಾಳೆ ಸರಕಾರ ಬದಲಾವಣೆಯಾಗುತ್ತದೆ ಎಂಬ ಅಭಿಪ್ರಾಯವಿದ್ದರೆ ಅದನ್ನು ತಿಳಿಸಿದರೆ ಒಪ್ಪಬಹುದು. ಅದಕ್ಕಾಗಿ 5 ದಿವಸಗಳ ಅವಧಿಗೆ ಸಭೆ ಕರೆದಿದ್ದರೆ ಒಪ್ಪಬಹುದಾಗಿತ್ತು. ಹಾಗಿಲ್ಲದ ಸಭೆಗೆ ತಪ್ಪು ತಿಳಿವಳಿಕೆ ಕೊಟ್ಟಿರುವುದು ಸರಿಯಲ್ಲ. ಹಿರಿಯರಾದ ಅವರ ದೃಷ್ಟಿ ದೋಷದಿಂದ ಹೀಗಾಗಿದೆಯೋ ಅಥವಾ ತಪ್ಪು ತಿಳಿವಳಿಕೆಯಿಂದ ಹೀಗಾಗಿದೆಯೋ ಗೊತ್ತಿಲ್ಲ. ಅವರು ಸಕಾಲದಲ್ಲಿ ಸರಿಯಾದ ತಿಳಿವಳಿಕೆ ಕೊಟ್ಟಿದ್ದರೆ ತುಂಬಾ ಉಪಕಾರವಾಗುತ್ತಿತ್ತು.

Mr. CHAIRMAN.—The member has already taken over one hour. I would like to know how much time he would take?

Sri K. H. PATIL.—It is a statement for discussion. I am doing my honest efforts. I cannot at all understand even one sentence. Every sentence needs clarification. If the House comes to know that the statement is wrong no one will be more happy than I. Therefore I may be permitted to continue. At the most I may conclude tomorrow by 1 P.M. ಮಾನ್ಯ ಸಭಾಪತಿಯವರೇ, 'ಇನ್ ದಿ ಈಯರ್ಸ್ ಟು ಕಂ' ಎಂದು ಹೇಳುವುದನ್ನು ನೋಡಿದರೆ ಈ ವರ್ಷದ್ದು ಎಂದು ಅರ್ಥವಾಗುತ್ತದೆ. ಈ ವರ್ಷ ಯಾವ ಯಾವ ಶಾಖೆಗೆ ಎಷ್ಟು ಹಣ ಬೇಕು, ಎಷ್ಟು ಒದಗಿಸಲು ಸಾಧ್ಯ ಎಂಬ ವಿವರ ಗೊತ್ತಿಲ್ಲದಿದ್ದರೆ ಏಕೆ ಬಜೆಟ್ ಪ್ರತಿಗಳನ್ನು ಮುದ್ರಣಮಾಡಬೇಕಾಗಿತ್ತು? ಲಕ್ಷಾವಧಿ ಜನರಿಗೆ ಒಂದು ಅಭಿಪ್ರಾಯ ಮೂಡುವಂತೆ ಮಾಡಿ ಬಜೆಟ್ಟನ್ನು ಮುದ್ರಿಸಲಾಗಿತ್ತು.

Mr. CHAIRMAN.—The House will now adjourn and meet after half-an-hour.

The House adjourned for Recess at Three of the Clock and reassembled at Thirty-five Minutes past Three of the Clock.

[Mr. SPEAKER in the Chair]

BUSINESS OF THE HOUSE.

Mr. SPEAKER.—I have heard every word of what the hon. Member Sri K. H. Patil has said in his speech though I was not physically present here. Tomorrow *i.e.*, Saturday is the last day, and the convention is to sit in the morning. So, I suggest that in accordance with the convention we will meet in the morning. There will be no Question Hour. As a few of my friends get up late and as they desire to have a little more rest in the morning, I suggest we meet at 9 A.M. and sit till 12 noon. Today there is tea by the Chief Minister to our departing Governor who is almost likely to be elected as the Vice-President. The elections are there. So, we must wish him well. I think I will be fulfilling the desire of all the members if I say that we rise at 5-30 P.M. to enable members to have just a little relaxation and then go to the party. So, the House will rise at 5-30 P.M.

Sri AZEEZ SAIT.—It will be better if we rise at 5 15 P.M. today so that some of us who are away from the Legislators Home may be able to go, have a wash and then come to the party.

Mr. SPEAKER.—I would suggest a temporary solution. The Whip may choose such of the members who are away from the Legislators Home and give them priority to take part in the discussion. I am not sitting; I am inviting a member from the panel of Chairmen to come and relieve me. May I suggest to the hon. Member Sri Patil to close his remarks within 15 minutes as he has already said very much.

MOTION TO CONSIDER THE STATEMENT OF THE CHIEF MINISTER ON THE FINANCIAL POSITION OF THE STATE

(Continued)

[MR. CHAIRMAN (DR. R. NAGAN GOWDA) in the Chair.]

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಭಾಪತಿಗಳೇ, ಇಷ್ಟು ಹೊತ್ತಿನ ತನಕ ನಮ್ಮ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರ ಸ್ಟೇಟ್‌ಮೆಂಟಿನ ಬಗ್ಗೆ ವಿವರವಾಗಿ ಹೇಳಿದ್ದಾಯಿತು. ನಾನು ಇನ್ನೂ ಐದಾರು ಗಂಟೆಗಳ ಕಾಲಪರ್ಯಂತ ಅವರ ಭಾಷಣದ ಬಗ್ಗೆ ಮಾತನಾಡಿದರೂ ಮುಗಿಯಲಾರದಷ್ಟು ಗಹನವಾದ ವಿಷಯಗಳನ್ನು ಅವರು ಸಭೆಯ ಎದುರಿಗೆ ನುಡಿದಿದ್ದಾರೆ. ಆದರೂ ಸಭಾಪತಿಗಳು ಅಪ್ಪಣೆಯನ್ನು ಕೊಟ್ಟಮೇರೆಗೆ ಈ ಸಭೆಯ ಮಹತ್ತರವಾದ ಕಾಲವನ್ನು ನಾನು ಹೆಚ್ಚು ಉಪಯೋಗಿಸದೆ ಉಳಿದ ಸದಸ್ಯರಿಗೂ ಅನುವಾಗುವಂತೆ ತೀವ್ರವಾಗಿ ಕೆಲವಾರು ಮಾತುಗಳಲ್ಲಿ ಮುಗಿಸಲು ಇಚ್ಛಿಸುತ್ತೇನೆ. ಅದೂ ಅಲ್ಲದೆ ನಾನು ಹೇಳುವ ಮಾತನ್ನು ಎದುರಿನಲ್ಲಿ ನಮ್ಮ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರು ಕೇಳಿದರೆ ಹೆಚ್ಚು ಉಚಿತವಾಗುತ್ತಿತ್ತು. ಅವರು ಇಲ್ಲದಾಗ ಅವರಿಗೆ ನೇರವಾಗಿ ಸಂಬಂಧಿಸಿದ ಕೆಲವು ಸಮಸ್ಯೆಗಳನ್ನು ನಾನು ಎತ್ತಿ ಮಾತನಾಡಲು ಅಪೇಕ್ಷಿಸುವುದಿಲ್ಲ. ಅವರು ಈ ಸಭೆಯಲ್ಲಿ ಇಲ್ಲದ್ದರಿಂದ ಅವರಿಗೆ ನೇರವಾಗಿ ಸಂಬಂಧಿಸದೇ ಇರತಕ್ಕ ಕೆಲವಾರು ಮಾತುಗಳನ್ನು ಮಾತ್ರ ಹೇಳಿ ಯಾವ ಸಂದರ್ಭದಲ್ಲಿ ಯಾವ ರೀತಿಯಿಂದ ಸರ್ಕಾರದ

(ಶ್ರೀ ಕೆ. ಎಚ್. ಪಾಟೀಲ್)

ಧೋರಣೆಯನ್ನು ಬದಲಾಯಿಸಿಕೊಂಡು, ಸಂದರ್ಭ ಒದಗಿದಾಗ ಪ್ರಸ್ತುತ ಪರಿಸ್ಥಿತಿಯನ್ನು ಜನತೆಯ ಹಿತದೃಷ್ಟಿಯಿಂದ ಕಾಪಾಡಿಕೊಳ್ಳಬೇಕು, ಜನತೆಯ ಹಿತದೃಷ್ಟಿಯಿಂದ ಆಡಳಿತವನ್ನು ಹೆಚ್ಚು ಸಬಲಗೊಳಿಸಬೇಕು ಎನ್ನುವಂತಹ ವಿಷಯದಲ್ಲಿ ಒಂದೆರಡು ಮಾತುಗಳನ್ನು ನಾನು ಹೇಳಲು ಅಪೇಕ್ಷೆಪಡುತ್ತಾ ಇದ್ದೇನೆ.

> "We are here as representatives of the people to consider how much of allo ment has to be made to each Department, taking into consideration the amount that may be made available. There are two sources—one from the State and the other from the Planning Commission..."

ಎಂತ ವಗೈರೆ ಹೇಳಿದ್ದಾರೆ. ಹೀಗೆ ಇವರು ಇಲ್ಲಿ ಹೇಳಿರತಕ್ಕ ಮಾತುಗಳನ್ನು, ಎರಡು ಮಾತುಗಳನ್ನೂ ತುಲನ ಮಾಡಿ ನೋಡಿದಲ್ಲಿ ಈಗಿರತಕ್ಕ ಮಂತ್ರಿಮಂಡಲದವರು ರಾಜ್ಯದಲ್ಲಿರತಕ್ಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವ ಕಾರ್ಯದಲ್ಲಿ ಇವರು ಸಂಪೂರ್ಣವಾಗಿ ವಿಫಲರಾಗಿದ್ದಾರೆಂಬುದು ಎಲ್ಲರಿಗೂ ಕಂಡು ಬರುತ್ತಿದೆ. ನಮ್ಮ ಸರ್ಕಾರದವರೇ ಇದ್ದರೂ ಬಹಳವಾಗಿ ಆ ಕೇಂದ್ರ ಸರ್ಕಾರದಿಂದ ಹಾಗೂ ಪ್ಲಾನಿಂಗ್ ಕಮಿಷನ್ನಿನವರಿಂದ ಬರತಕ್ಕ ಹಣವನ್ನೇ ನಿರೀಕ್ಷಿಸಿಕೊಂಡು ಕುಳಿತಿರುವಂತೆ ಕಂಡು ಬರುತ್ತಿದೆ. ರಾಜ್ಯದ ಅರ್ಥ ವಿಚಾರದಲ್ಲಿ ನಾಪೀ ದಿವಸ ನಮ್ಮ ಎದುರಿನಲ್ಲಿ ಎರಡು ರೀತಿಯ ಸ್ಟೇಟ್‌ಮೆಂಟುಗಳನ್ನು ನೋಡುತ್ತಿದ್ದೇವೆ. ಇವುಗಳಲ್ಲಿ ಒಂದು ಮಾನ್ಯ ಹೆಗಡೆಯವರದು ಇನ್ನೊಂದು ರಾಜ್ಯದ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರದು. ಆದರೆ ಈ ಎರಡು ಹೇಳಿಕೆಗಳೂ ಒಂದಕ್ಕೊಂದು ತದ್ವಿರುದ್ಧವಾಗಿವೆ. ಹೀಗೆ ಒಂದಕ್ಕೊಂದು ತದ್ವಿರುದ್ಧವಾದ ಸ್ಟೇಟ್‌ಮೆಂಟುಗಳನ್ನು ಕೊಟ್ಟಿರತಕ್ಕ ಇಬ್ಬರು ಉಭಯತ್ರ ಮಹನೀಯರೂ ಒಂದೇ ಕ್ಯಾಬಿನೆಟ್ನಲ್ಲಿದ್ದಾರೆ. ಮಾನ್ಯ ಅರ್ಥ ಸಚಿವರಾದ ಹೆಗಡೆಯವರು ನಾಯಕರಾದ ಶ್ರೀ ನಿಜಲಿಂಗಪ್ಪನವರಿಗೆ ಸಹಾಯಕರಾಗಿರತಕ್ಕವರು. ಹಾಗಿರುವಾಗ ಅವರು ಅವರಮೇಲೆ ಈ ಹಣಕಾಸಿನ ಜವಾಬ್ದಾರಿ ಎಷ್ಟರಮಟ್ಟಿಗೆ ಇದೆಯೆಂಬುದನ್ನು ಅರಿಕೇ ಅವರ ಹೇಳಿಕೆಯನ್ನು ಇತ್ತಿದ್ದಾರೆ ಎಂದು ನಾನು ಭಾವಿಸುತ್ತೇನೆ. ಆ ಅರ್ಥಿಕ ಮಂತ್ರಿಗಳು ಕೊಟ್ಟಿರತಕ್ಕ ಹೇಳಿಕೆಯು ನಿಜವಾದುದು ಅನ್ನುವುದಾದರೆ, ಅದಕ್ಕೆ ತದ್ವಿರುದ್ಧವಾಗಿ ಈ ಮಾನ್ಯ ಸಭೆಯ ಮುಂದೆ ನಿಜವಲ್ಲದ ಹಾಗೂ ಸತ್ಯಕ್ಕೆ ದೂರವಾದ ಒಂದು ಹೇಳಿಕೆಯನ್ನು ಮಾನ್ಯ ಶ್ರೀ ನಿಜಲಿಂಗಪ್ಪನವರು ಕೊಟ್ಟಿರುವುದರಿಂದ ಅವರೇಕೆ ಈ ದಿವಸ ರಾಜಿನಾಮೆ ಕೊಡಬಾರದು ಎಂದು ಕೇಳತಕ್ಕದು ದೇಶದ ಆಡಳಿತೆಯ ಜವಾಬ್ದಾರಿಯನ್ನು ಹೊತ್ತಿರತಕ್ಕವರ ಕರ್ತವ್ಯವಾಗಿದೆ. ಅವರು ರಾಜಿನಾಮೆ ಕೊಡಬೇಕಾದ್ದು ಏತಕ್ಕೆಂದರೆ ಈ ಮಾನ್ಯ ಸಭೆಯ ನಡವಳಿಕೆಗಳಿಗೆ ತದ್ವಿರುದ್ಧವಾಗಿ ಸತ್ಯಕ್ಕೆ ದೂರವಾದ ವಿಚಾರವನ್ನು ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಈ ಸಭೆಯ ಮುಂದೆ ಮಂಡಿಸಿದಾಗ, ಅವರು ಅಂಥ ಒಂದು ಜವಾಬ್ದಾರಿಯುತವಾದ ಸ್ಥಾನದಲ್ಲಿರುವುದಕ್ಕೆ ಅರ್ಹರಲ್ಲ ಎಂಬುದು ಒಂದು ಸತ್ಸಂಪ್ರದಾಯವಿದೆ. ಅಂಥ ಒಂದು ಸತ್ಸಂಪ್ರದಾಯವನ್ನು ಅವರು ಅನುಸರಿಸುವುದಾದರೆ ಅವರು ಕೂಡಲೇ ರಾಜೀನಾಮೆಯನ್ನು ಕೊಡಲೇ ಬೇಕು. ಇದು ಸರಿಯಾದ್ದು ಎಂಬುದನ್ನು ಆ ಮಾನ್ಯ ಮಿತ್ರರು ತಿಳಿದುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ.

ಈಗ ಈ ಮಾನ್ಯ ಸಭೆಯ ಹಕ್ಕುಬಾಧ್ಯತೆಗಳನ್ನು ಉಲ್ಲಂಘಿಸಿರತಕ್ಕವರು ಯಾರು ? ಅಥವಾ ನಿಜಾಂಶವಾದುದನ್ನು ಬಚ್ಚಿಟ್ಟು ಅಲ್ಲದ ಇನ್ನೊಂದು ಸಂಗತಿಯನ್ನು ನಮ್ಮ ಮುಂದೆ ತಂದಿರತಕ್ಕವರು ಯಾರು ? ಅಂದರೆ ಜವಾಬ್ದಾರಿಯುತವಾದ ಸ್ಥಾನದಲ್ಲಿರತಕ್ಕ ನಮ್ಮ ನಾಯಕರು ಯಾರಿದ್ದಾರೋ ಅವರ ಮೇಲೆ ಈ ಅಪಾದನೆಗಳು ಇರುತ್ತವೆಂಬುದು ಇಲ್ಲಿ ಇರತಕ್ಕವರೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಅವರು ತಮ್ಮ ಹಕ್ಕುಬಾಧ್ಯತೆಗಳನ್ನು ಉಲ್ಲಂಘಿಸಿ ಸತ್ಯಕ್ಕೆ ದೂರವಾದ ವಿಚಾರಗಳನ್ನು ಇಲ್ಲಿ ಮಂಡಿಸಿದ್ದಾರೆಂಬುದು ಎಲ್ಲಾ ಮಾನ್ಯ ಸದಸ್ಯರಿಗೂ ತಿಳಿದಿದೆ. ದೇಶದ ಆಡಳಿತವನ್ನು ನಡೆಸತಕ್ಕ ವಿಚಾರದಲ್ಲಿ ಎಷ್ಟೇ ಪಾರ್ಟಿಗಳಿರಲಿ ಅವರೆಲ್ಲರೂ ಇಲ್ಲಿ ಏಕೀಕರಿಸಿ ಒಂದು ಸಹಕಾರಭಾವದಿಂದ ಅರಿತುಕೊಂಡು ಎಲ್ಲಾ ಪಕ್ಷಗಳೂ ಒಂದು ಅನ್ಯೋನ್ಯ ಭಾವದಿಂದ ದೇಶಾಭ್ಯುದಯದ ಕೆಲಸಕಾರ್ಯಗಳನ್ನು ಮಾಡಬೇಕೆಂಬ ಒಂದು ವಾತಾವರಣ ಇಲ್ಲಿರಬೇಕಾದ್ದು ಅತ್ಯಗತ್ಯ. ಆದರೆ ಅಂಥ ಒಂದು ವಾತಾವರಣವನ್ನು ಈ ದಿವಸ ನಾಯಕರು ಕಲುಷಿತಗೊಳಿಸಿರತಕ್ಕ ವಿಷಯ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸತಕ್ಕ ಹಕ್ಕು ಬಾಧ್ಯತೆಗಳಿಗೆ ಧಕ್ಕೆಯನ್ನು ತಂದಿರುವುದರಿಂದ ಇದೊಂದು ಪ್ರಿವಿಲೇಜ್ ಮೋಷನ್ನಿಗೆ ಒಳಪಟ್ಟಂಥ ವಿಷಯವಾಗಿದೆ.

ಇನ್ನು ಮುಂದಕ್ಕಾದರೂ ನಮ್ಮ ನಾಯಕರು ಹೀಗೆ ಸಭೆಗೆ ಗೌರವವಲ್ಲದ ವಿಷಯಗಳನ್ನು ಸಭೆಯಲ್ಲಿ ಹೇಳಿಕೆ ಮಾಡದಿರುವಂತೆ ಪರಮಾತ್ಮನು ಅವರಿಗೆ ಸರಿಯಾದ ತಿಳಿವಳಿಕೆಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ. ನಮ್ಮ ಹಿರಿಯ ಸಭಾನಾಯಕರಾದ ಶ್ರೀ ಎಸ್. ನಿಜಲಿಂಗಪ್ಪನವರು ಮೊನ್ನೆ ಸಭೆಯಲ್ಲಿ ಮಾತನಾಡತಕ್ಕ ಭರದಲ್ಲಿ ಅವರಿಗೆ ಲೀಡರ್‌ಷಿಪ್‌ಮೇಲೆ ಅಷ್ಟೇನೂ ಉತ್ಸಾಹವಿಲ್ಲವೆಂದೂ, ಅವರು ಅದರ ಬಗ್ಗೆ ಅಷ್ಟೇನೂ ಕಾಳಜಿ ಇಟ್ಟುಕೊಂಡಿಲ್ಲವೆಂದೂ ಹೇಳುತ್ತಾ, ಅತ್ತಕಡೆ ಇರತಕ್ಕವರು ಇತ್ತಲಾದರೂ ಬರಲಿ, ಇತ್ತಕಡೆ ಇರತಕ್ಕವರು ಅತ್ತಕಡೆ ಗಾದರೂ ಹೋಗಲಿ, ಈ ವಿಚಾರದಲ್ಲಿ ತಾವು ಯಾವ ಆಸೆಯನ್ನೂ ತಳೆದಿರುವುದಿಲ್ಲವೆಂಬ ಅರ್ಥ ಬರುವಂತೆ ಅವರು ಮಾತನಾಡಿದುವೆಲ್ಲಾ ಕೇವಲ ಒಂದು ಅಭಿನಯ ಮಾತ್ರ ಎಂದು ನಮಗೆ ತಿಳಿದು ಬಂದಿದೆ. ಏಕೆಂದರೆ, ಅವರು ನಡೆಸಿರತಕ್ಕ ಕಾರ್ಯ, ಅವರು ಆಡಿರತಕ್ಕ ಮಾತುಗಳೆಲ್ಲಾ ತದ್ವಿರುದ್ಧವಾಗಿದ್ದು ಅವರು ರಾಜ್ಯದ ಸಂಪತ್ತನ್ನು ಸೂರೆಗೈದಿದ್ದಾರೆಂದು ನಮಗೆ ತಿಳಿದುಬಂದಿದೆ. ರಾಜ್ಯ ಯಾವುದೇ ಇರಲಿ, ಅದನ್ನು ಯಾರೇ ಆಳಲಿ, ಅದನ್ನು ಕೇಳತಕ್ಕವರು ಇರಲಿ, ಇಲ್ಲದಿರಲಿ, ಇಲ್ಲಿ ಸೇರಿರತಕ್ಕವರೆಲ್ಲರೂ ಒಂದು ಸಮರಸದಿಂದ ಜನ ಹಿತಕಾರ್ಯಗಳನ್ನು ಮಾಡಿ, ಜನಸೇವೆಯೇ ಜನಾರ್ಧನನ ಸೇವೆ ಎಂಬುದನ್ನು ಮರೆತು ಈ ದಿವಸ ಟ್ರೆಜರಿ ಬೆಂಚಿನಲ್ಲಿರತಕ್ಕವರು ತಮ್ಮ ಆಡಳಿತ ನಿರ್ವಹಣೆಯಲ್ಲಿ ಹದ್ದುಮೀರಿ ಅಧಿಕಾರ ದರ್ಪವನ್ನು ನಡೆಸಿರುವುದರಿಂದ ಇಲ್ಲಿ ಈ ದಿವಸ ಆ ಪ್ರಜಾಪ್ರಭುತ್ವ ತತ್ವಗಳನ್ನೆಲ್ಲಾ ಗೋರಿಮಾಡಲಾಗಿದೆ. ಹೀಗಾಗಬಾರದು. ಪ್ರಜಾಪ್ರಭುತ್ವ ತತ್ವಗಳನ್ನು ಉಳಿಸಿ ಬೆಳಸಿಕೊಂಡು ಬರಲು ವಿರೋಧಪಕ್ಷದವರು ಎಷ್ಟೇ ರಚನಾತ್ಮಕ ಸಲಹೆ ಗಳನ್ನು ಆಡಳಿತ ಪಕ್ಷಕ್ಕೆ ಕೊಟ್ಟಾಗ್ಯೂ ಆ ಸಲಹೆಯಲ್ಲಿ ಏನೇನು ಒಳ್ಳೆಯದು ಇರುತ್ತದೋ ಅದನ್ನು ಹೇಗೆ ಉಪಯೋಗಮಾಡಿಕೊಳ್ಳಬೇಕು ಎಂಬುದನ್ನು ಆಲೋಚನೆ ಮಾಡದೆ, ಅದು ವಿರೋಧಪಕ್ಷದವರು ಕೊಡತಕ್ಕ ಸಲಹೆಗಳಾದ್ದರಿಂದ ಅದನ್ನು ಆಡಳಿತ ಪಕ್ಷದವರು ಕೇಳಲೇಬಾರದು ಅನ್ನುವಂಥ ಮಾತನ್ನು ಯಾರೂ ಒಪ್ಪುವುದಿಲ್ಲ. ಇಂದು ಮತ್ತು ನೆನ್ನೆ, ಮೊನ್ನೆ ಇಲ್ಲಿ ಆಡಳಿತದ ವಿಚಾರವಾಗಿ ನಡೆದಿರತಕ್ಕ ಚರ್ಚೆಯ ಬಗ್ಗೆ ಆಡಳಿತವರ್ಗದವರು ಇಲ್ಲಿ ನಡೆಯಬೇಕಾಗಿದ್ದ ಕಾರ್ಯಕಲಾಪಗಳಿಗೆ ವಿರೋಧಪಕ್ಷದವರೇ ಅಡ್ಡಿಯನ್ನು ಒಡ್ಡಿದ್ದಾರೆಂದು ಅಪಪ್ರಚಾರವಮಾಡಿರ ತಕ್ಕದ್ದು ನಿಜವಾಗಿಯೂ ದುರ್ದೈವದ ಸಂಗತಿ. ಇದು ದೇಶಾದ್ಯಂತವೂ ಹರಡಬಹುದು. ಆದರೆ ಜನಸಾಮಾನ್ಯರಿಗೆ ಇಲ್ಲಿ ನಡೆಯತಕ್ಕ ಕಾರ್ಯಕಲಾಪಗಳ ನಿಜಾಂಶ ಗೊತ್ತಾಗುವುದು ಕಷ್ಟ. ಇಲ್ಲಿ ವಿರೋಧಪಕ್ಷದವರಿಗೆ ಎಲ್ಲವನ್ನೂ ವಿರೋಧಿಸಲೇಬೇಕೆಂಬ ಹವ್ಯಾಸವೇನೂ ಇಲ್ಲ. ಆದರೆ ಮೊನ್ನೆ ಇಲ್ಲಿ ಮುಖ್ಯಮಂತ್ರಿಗಳು ಮಾಡಿದಂಥ ಒಂದು ಸ್ಟೇಟ್‌ಮೆಂಟ್ ಏನಿತ್ತು ಅದರ ವಿಚಾರವಾಗಿ ಒಂದು ಗಂಭೀರವಾದ ಪರಿಸ್ಥಿತಿಯುಂಟಾಗಿದೆ. ಇಲ್ಲಿ ಚರ್ಚೆ ನಡೆಯುತ್ತಿದ್ದ ಕಾಲದಲ್ಲಿ ಮುಖ್ಯ ಮಂತ್ರಿಗಳೂ ಮತ್ತು ಎಲ್ಲಾ ಮಂತ್ರಿಗಳೂ ಇದ್ದರು. ಆದರೆ ನೆನ್ನೆಯ ವಿಚಾರಕ್ಕೂ ಈ ದಿವಸ ಇಲ್ಲಿ ಚರ್ಚೆಯಾಗುತ್ತಿರುವ ವಿಚಾರಕ್ಕೂ ವ್ಯತ್ಯಾಸವಿದೆ. ನಾವು ಈ ದಿವಸ ಅನೇಕ ರಚನಾತ್ಮಕ ಸಲಹೆಗಳನ್ನು ಮಾಡುತ್ತಿರುವ ಕಾಲದಲ್ಲಿ ಇಲ್ಲಿ ಮಂತ್ರಿಗಳೊಬ್ಬರೂ ಇಲ್ಲದಿರುವುದನ್ನು ನೋಡಿದರೆ ಅವರ ನಿಲುವೇನೆಂಬುದೇ ನಮಗೆ ಅರ್ಥವಾಗುತ್ತಿಲ್ಲ. ಅವರು ಮಾಡುತ್ತಿರುವುದನ್ನ ನೋಡಿದರೆ ನಮಗೆ ಅನುಮಾನ ಉಂಟಾಗುತ್ತಿದೆ. ನಾವು ಕೊಡತಕ್ಕ ರಚನಾತ್ಮಕ ಸಲಹೆಗಳಲ್ಲಿ ಏನಾದರೂ ಅಂಥ ದೋಷಗಳಿವೆಯೆಂದು ತಿಳಿಸಿದರೆ ಅದನ್ನು ತಿದ್ದಿಕೊಂಡು ಸರಿಯಾದ್ದನ್ನು ಮಾನ್ಯತೆ ಮಾಡಿ ಕೆಲಸಮಾಡಬೇಕೆಂಬ ಮನಸ್ಸು ಅವರಿಗಿಲ್ಲ. ಅವರು ಈಗ ಸಭೆಯಲ್ಲಿ ಹಾಜರಿಲ್ಲದಿರುವುದು ನಮಗೆ ಆಶ್ಚರ್ಯವನ್ನುಂಟುಮಾಡಿದೆ. ಇದನ್ನು ನೋಡಿದರೆ ನಮಗೆ ಸರ್ಕಾರದ ಧೋರಣೆಯ ಬಗ್ಗೆ ಹಾಗೂ ಅವರ ನಡವಳಿಕೆಯ ಬಗ್ಗೆ ಬಹಳ ಸಂಶಯ ಬರುತ್ತಿದೆ. ಇದೇ ಮಾನ್ಯ ಸಭೆಯಲ್ಲಿ ಕೆಲವು ದಿನಗಳ ಹಿಂದೆ ನಮ್ಮ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದವರು ಯಾವ ಯಾವ ರಾಜ್ಯಗಳಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿರುತ್ತಾರೆಂಬುದನ್ನು ತಿಳಿಸುತ್ತಾ ನಮ್ಮ ಮೈಸೂರು ರಾಜ್ಯಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂಬುದನ್ನು ತಿಳಿಸಿದ್ದರು. ಆದರೆ ಈ ದಿವಸ ಹಾಗೆ ಅವರು ಎಲ್ಲಾ ರಾಜ್ಯಗಳಿಗೂ ಹಾಗೆ ಕೊಟ್ಟಿರತಕ್ಕ ಹಣದಲ್ಲಿ ಅಷ್ಟೇನೂ ಹೆಚ್ಚುಕಡಿಮೆಯಾಗಿಲ್ಲ, ಅಂಥ ವಿಪರ್ಯಾಸಗಳೇನೂ ಆಗಿಲ್ಲ. ಮೇಲಾಗಿ ನಾವು ಈಗಾಗಲೇ ಒಂದು ಬಜೆಟ್ಟಿನ ಕೆಲವು ಭಾಗವನ್ನು ಓಟ್ ಆನ್ ಅಕೌಂಟ್ ಎಂದು ಹೇಳಿ ಅದನ್ನು ಪಾಸ್‌ಮಾಡಿದ್ದೇವೆ. ಹೀಗಿರುವಾಗ ಸರ್ಕಾರದವರು ಕೇಂದ್ರದಿಂದ ಬರತಕ್ಕ ಹಣ ಕಡಮೆಯಾಯಿತೆಂದು ಹೇಳಿ ರಾಜ್ಯದಲ್ಲಿ ನಡೆಯತಕ್ಕ ಕೆಲವು ದೊಡ್ಡ ದೊಡ್ಡ ಯೋಜನೆಗಳಿಗೆ, ಅಂದರೆ ಕೋಟ್ಯಾನು ಕೋಟಿ ರೂಪಾಯಿಗಳು ಬೇಕಾಗುವಂಥ ಮಲಪ್ರಭಾ ಇತ್ಯಾದಿ ಯೋಜನೆಗಳಿಗೆ ಇವರು ದುಡ್ಡಿಲ್ಲವೆಂದು ಹೇಳಿ ಕೆಲಸವನ್ನು ನಿಲ್ಲಿಸಿದರೆ ಇವರು ದೇಶಕ್ಕೂ ಜನತೆಗೂ ತುಂಬಾ ದ್ರೋಹ ಮಾಡಿದ ಹಾಗೆ ಆಗುತ್ತದೆ. ಸ್ವಾಮಿ, ಗದಗಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ತುಂಗಭದ್ರಾ ನದಿಯಿಂದ ನೀರನ್ನು ತರಬೇಕೆಂದು ನಾವು ಕೇಳು ತ್ತಿದ್ದರೆ ಅದು ಸಾಧ್ಯವಿಲ್ಲ, ಮಲಪ್ರಭಾ ನೀರನ್ನು ಅಲ್ಲಿಗೆ ಒದಗಿಸುತ್ತೇವೆಂದು ಹೇಳುತ್ತಿದ್ದಾರೆ.

(ಶ್ರೀ ಕೆ. ಎಚ್. ಪಾಟೀಲ್)

ಆದರೆ ಆ ಯೋಜನೆಯೇ ಇನ್ನೂ ಪೂರ್ತಿಯಾಗಿಲ್ಲ. ಅದೇ ಪೂರ್ತಿಯಾಗದಿರುವಾಗ ಇನ್ನು ಅದನ್ನು ಪ್ರಾರಂಭಮಾಡುವುದೆಲ್ಲಿ ಬಂತು? ಅದಕ್ಕೆ ಕೇಂದ್ರದಿಂದ ಹಣ ಬರಬೇಕು ಅಂತಹ ಕೊರತೆಯಾದಾಗ ಈ ಯೋಜನೆಯಾದರೂ ಪೂರ್ತಿಯಾಗಿ ಆಗದಿದ್ದರೆ ಮುನಿಸಿಪಾಲಿಟಿ ಯವರು ಇದಕ್ಕಾಗಿ ಲಕ್ಷಾಂತರ ರೂಪಾಯಿಗಳಷ್ಟು ಹೊರೆಯನ್ನು ಹೊತ್ತುಕೊಂಡು ಖರ್ಚು ಮಾಡುತ್ತಿರಲಿಲ್ಲ. ಹೀಗಿರುವಾಗ ಯಾವ ಪೈಪಿನಿಂದ ನೀರನ್ನು ಒಯ್ಯಬೇಕು ಎನ್ನುವ ಮಾತನ್ನು ಇಲ್ಲಿ ಕೇಳಬೇಕಾಗಿದೆ ಸ್ವಾಮೀ. ಇದು ಯಾವ ರೀತಿಯಾದ ನೀತಿ? ಇದು ಯಾವ ರೀತಿಯಾದ ಜಾಣ್ಮೆ ಮತ್ತು ಇದು ಯಾವ ರೀತಿಯಾದ ಮುತ್ಸದ್ದಿತನದ ಧೋರಣೆ! ಮೈಸೂರು ದೇಶದಲ್ಲಿ ಪ್ರಜಾಪ್ರಭುತ್ವದ ಸರಕಾರವಿದೆ ಎಂದು ನಾನು ಹೇಳುವಂತೆ ನನ್ನ ಇತರ ಎಲ್ಲ ಸದಸ್ಯರ ಅಭಿಪ್ರಾಯವೂ ಇದೆ ಎಂದು ನಾನು ಭಾವಿಸುತ್ತೇನೆ. ಸರಕಾರ ನಿರ್ದಿಷ್ಟವಾದ ಯೋಜನೆಯನ್ನು ಮಾಡಿ ನಮ್ಮ ಕೈಗೆ ಕೊಟ್ಟಿಲ್ಲ. ಯೋಜನೆಯೇ ಇಲ್ಲದಿರುವಾಗ ಇದನ್ನು ಜನಗೇ ಬಿಟ್ಟುಬಿಡಿ ಎಂದು ಹೇಳಿದಾಗ ಹಾಗೂ ನ್ಯಾಯಬದ್ಧವಾಗಿ ಗದಗಿನ ಮುನಿಸಿಪಾಲಿಟಿಯವರು ಕೇಳಿದಾಗ ನಮ್ಮ ಮಾನ್ಯ ಮಂತ್ರಿಗಳು ಇವೆಲ್ಲವನ್ನೂ ಬದಿಗಿಟ್ಟು ಇದನ್ನು ಸಸ್‌ಪೆಂಡು ಮಾಡಿದ್ದೇವೆ ಎಂದು ಹೇಳಿದರೆ ನಿಮ್ಮ ಆಡಳಿತ ಚೆನ್ನಾಗಿದೆಯೆಂದು ಹೇಳಬಹುದೇ? ಮುನಿಸಿಪಾಲಿಟಿಯವರನ್ನು ಹೀಗೆ ತಪ್ಪುದಾರಿಗೆ ಎಳೆಯಬಹುದೇ? ಕೇಂದ್ರದಲ್ಲಿ ನಾಯಕರಾಗಿರುವಂತಹವರು ಒಂದು ಪತ್ರ ಕೊಟ್ಟ ಹೇಳಿಕೆಯಲ್ಲಿ ನಿಮ್ಮ ಅರಿವೆಗೆ ತಕ್ಕಂತ ಅಳತೆ ನೋಡಿಕೊಂಡು ಕೋಟನ್ನು ಹೊಲಿಸಿಕೊಳ್ಳಿ ಎಂದು ಹೇಳಿದ್ದಾರೆ. ಹೀಗಿರುವಾಗ ನಿಮ್ಮ ಸರಕಾರದವರು ಯಾವ ಅಳತೆಯನ್ನು ನೋಡಿಕೊಂಡು ಕೋಟನ್ನು ಹೊಲಿಸಿಕೊಂಡಿದ್ದೀರಿ? ನಿಮ್ಮ ಅರಿವೆಯ ಅಳತೆಯೇ ಗೊತ್ತಿಲ್ಲವೇ ಜನತೆಯ ಮುಂದೆ ಇಟ್ಟಿರುವ ಈ ಬಡ್ಜೆಟ್ಟಿನ ಅಂದಾಜು ಬರೀ ನಾಟಕವಲ್ಲವೇ? ಇಲ್ಲಿಗೆ ಎಲ್ಲ ಮಾನ್ಯ ಸದಸ್ಯರು ಬಂದಿರುವುದು ಕೇವಲ ಒಂದು ಆಟ ಆಡಲಿಕ್ಕೆ ಬಂದಿದ್ದಾರೆಯೇ? ಹಾಗೂ ಐದು ದಿನಗಳ ಕಾರ್ಯ ಕಲಾಪಗಳನ್ನು ಕುರಿತು ಅಭಿಪ್ರಾಯಗಳನ್ನು ಕೊಟ್ಟು ಮಾತನಾಡಬೇಕೆಂದರೆ ಇದರಿಂದ ಜನತೆಯ ಹಣವನ್ನು ಯಾವ ರೀತಿ ಅಪವ್ಯಯ ಮಾಡುತ್ತಿದ್ದಾರೆ ಎನ್ನುವುದು ಜನರಲ್ಲಿ ಬರುವುದಿಲ್ಲವೇ? ಜನತೆಯ ಹಣ ಇದರಿಂದ ಪೋಲು ಆಗುತ್ತದೆ ಎಂದು ಹೇಳುವುದಕ್ಕೆ ಕಾರಣವಾಗುವುದಿಲ್ಲವೇ? ಅಲ್ಲದೆ ಸರಕಾರದ ಹಣ ಎಲ್ಲೆಲ್ಲಿ ಪೋಲಾಗುತ್ತಿದೆ ಎನ್ನುವುದಕ್ಕೆ ಇನ್ನೂ ಅನೇಕ ವಿಷಯಗಳನ್ನು ಈ ಸಭೆಯ ಗಮನವನ್ನು ಸೆಳೆಯಬೇಕೆಂದು ಇದ್ದೇನೆ. ಅನೇಕ ಸಂದರ್ಭಗಳಲ್ಲಿ ಸರಕಾರದ ಹಣ ಹೆಚ್ಚು ಹೆಚ್ಚಾಗಿ ಪೋಲಾಗುತ್ತಿದೆ. ಸರಕಾರ ಈಗ ಕೇವಲ ನಾಲ್ಕು ತಿಂಗಳಿಗಾಗಿ ಹಣವನ್ನು ಪಡೆದುಕೊಂಡಿದೆ. ಮತ್ತು ಇದನ್ನು ಈ ಸಭೆಯವರು ಮಂಜೂರು ಮಾಡಿದ್ದಾರೆ. ಈಗಿನಿಂದಲೇ ಇದನ್ನು ಸರಿಯಾಗಿ ಬ್ಯಾಲೆನ್ಸ್ ಮಾಡಿಕೊಂಡು ಇನ್ನು ಎಂಟು ತಿಂಗಳಲ್ಲಿ ಎಷ್ಟು ಉಳಿತಾಯ ಮಾಡಲು ಸಾಧ್ಯವೋ ಅಷ್ಟನ್ನು ಮಾಡಲು ಈಗಿನಿಂದಲೇ ಪ್ರಯತ್ನ ಮಾಡಿ, ಯಾವಾಗಲೂ ಹೊರಗಿನವರ ಸಾಲದ ಮೇಲೆಯೇ ಹೋಗಬೇಡಿ. ಕೇಂದ್ರದವರು ಸಾಲ ಕೊಡುತ್ತಾರೆಂದು ಅವರನ್ನು ಕೇಳುವುದಕ್ಕೆ ಹೋಗಬಾರದು. ನಮ್ಮ ಕಾಲಿನ ಮೇಲೆಯೇ ನಾವು ನಿಲ್ಲುವಂತೆ ನಾವು ಕೆಲಸ ಮಾಡಲು ಪ್ರಯತ್ನ ಮಾಡೋಣ. ಹಾಗೆ ಮಾಡುವುದಾದರೆ ನಮ್ಮ ಜನಕ್ಕೆ ಎಷ್ಟೋ ಅನುಕೂಲಗಳಾಗುತ್ತವೆ. ನಮಗೆ ಇನ್ನೂ ಎಷ್ಟೋ ಕೋಟ್ಯಾಂತರ ರೂಪಾಯಿಗಳು ಬೇಕಾಗಿರುವಾಗ ನಮಗೆ ಬರಬೇಕಾ ಗಿರುವ ಹಣವನ್ನು ಸರಿಯಾಗಿ ವಸೂಲು ಮಾಡುವ ಪ್ರಯತ್ನ ಮಾಡಬೇಕು! ಇದರ ಬಗ್ಗೆ ಇಲ್ಲಿಯ ವರೆಗೆ ಸರಕಾರ ಕೈಗೊಂಡಿರುವ ಕಾರ್ಯಕ್ರಮವೇನು! ವಸೂಲು ಮಾಡಲು ಯಾವ ಕ್ರಮವನ್ನೂ ತೆಗೆದುಕೊಂಡಂತೆ ನಮಗೆ ಕಾಣುತ್ತಿಲ್ಲ. ಹೀಗಿರುವಾಗ ನಮ್ಮ ಗದಗದ ಮುನಿಸಿಪಾಲಿಟಿಯವರ ಆಡಳಿತ ಸರಿಯಾಗಿಲ್ಲ ಎಂದು ಸಸ್‌ಪೆಂಡ್ ಮಾಡುವುದು ಯಾವ ರೀತಿಯಾದ ಸರಕಾರದ ನೀತಿ ಎಂದು ಇಲ್ಲಿ ನಾನು ಕೇಳಬೇಕಾಗಿದೆ. ಅಧಿಕಾರದಲ್ಲಿರುವವರಿಗೆ ಒಂದು ರೀತಿಯಾದ ಕಾಯಿದೆ ಬಾಕಿ ಇತರ ಜನರಿಗಾಗಿ ಒಂದು ಕಾಯಿದೆ ಎಂದು ಮಾಡಿದ್ದೇವೆಯೋ? ಕಾಯಿದೆ ಎಂದರೆ ಎಲ್ಲರಿಗೂ ಒಂದೇ ರೀತಿಯಾಗಿ ಅನ್ವಯಿಸುವಂತಹುದು. ನಿಮಗೆ ಬೇಕಾದವರಿಗೇ ಒಂದು ನೀತಿ, ನಿಮಗೆ ಬೇಡವಾದವರಿಗೇ ಒಂದು ನೀತಿಯೆಂದು ಹೇಳುವುದು ಇದು ಪ್ರಜಾಪ್ರಭುತ್ವದ ಬುನಾದಿಯೇ? ಮೈಸೂರು ರಾಜ್ಯ ಮಾದರಿ ರಾಜ್ಯ ಎಂದು ಹೆಸರು ಪಡೆದಂತಹ ರಾಜ್ಯವನ್ನು ಈಗ ಆ ರೀತಿ ಕರೆಯಲು ಸಾಧ್ಯವೇ? ಮಾನ್ಯ ಸಭಾ ನಾಯಕರು ಕೊಟ್ಟಿರುವ ಹೇಳಿಕೆಯ ಬಗ್ಗೆ ಇನ್ನು ಎಷ್ಟು ತಾಸು ಬೇಕಾದರೂ ಸರಕಾರದ ಲೋಪ ದೋಷಗಳನ್ನು ಹೇಳಬಹುದು. ಆದರೆ ಇತರ ಮಾನ್ಯ ಸದಸ್ಯರುಗಳು ಸಭಾ ನಾಯಕರ ಹೇಳಿಕೆಯ ಬಗ್ಗೆ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಕೊಡಬೇಕೆನ್ನುವ ದೃಷ್ಟಿಯಿಂದ ನಾನು ಹೆಚ್ಚಾಗಿ ಇದರ ಹವ್ಯಾಸಕ್ಕೆ ಹೋಗಿ ಹೇಳುವು ದಿಲ್ಲ. ಇನ್ನಾದರೂ ನಮ್ಮ ಮಾನ್ಯ ನಾಯಕರಾದ ಶ್ರೀ ನಿಜಲಿಂಗಪ್ಪನವರು ಅವರ ಆಡಳಿತದ ಬಗ್ಗೆ

ಸರಿಯಾದ ವಿಚಾರಗಳನ್ನು ತಿಳಿಸಿ ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುವುದನ್ನು ಬಿಡಲಿ ಎಂದು ಇಲ್ಲಿ ಸೂಚಿಸುತ್ತೇನೆ. ಪ್ರಾಮಾಣಿಕವಾದ ಅಭಿಪ್ರಾಯಗಳನ್ನು ಇಲ್ಲಿ ಹೇಳಿ ನ್ಯಾಯವಾದ ಕೆಲಸಗಳು ಆಗುವಂತೆ ನಮ್ಮ ದೇಶದ ಹಣವನ್ನು ಖರ್ಚು ಮಾಡಲು ಅವರಿಗೆ ದೇವರು ಸದ್ಬುದ್ಧಿಯನ್ನು ಕೊಡಲಿ. ಅಲ್ಲದೆ ಇಂದು ನಮ್ಮ ದೇಶದ ನಾಯಕರಾಗಿ ಕೊಟ್ಟಿರುವ ಹೇಳಿಕೆಯು ಯಾವ ರೀತಿಯಾಗಿಯೂ ಸಮಾಧಾನವನ್ನು ತರುವಂತಹುದಲ್ಲ. ಇವೆಲ್ಲ ಸತ್ಯಕ್ಕೆ ಬಹು ದೂರವಾದ ಸಂಗತಿಗಳು. ಇಂತಹ ಸಂಗತಿಗಳನ್ನು ಇಲ್ಲಿ ಇಟ್ಟಿರುವುದಕ್ಕಾಗಿ ನಾನು ತುಂಬಾ ವಿಷಾದ ಪಡುತ್ತೇನೆ. ನನ್ನ ವಿಷಾದವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಾ ದೇವರು ಇವರಿಗೆ ಇನ್ನು ಮುಂದಾದರೂ ಇಂತಹ ಅವಕಾಶಗಳನ್ನು ಉಂಟುಮಾಡದೇ ಇರಲಿ ಎಂದು ಪ್ರಾರ್ಥನೆ ಮಾಡಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†Sri H. SIDDAVEERAPPA.—Mr. Speaker, Sir, at the outset I owe a duty to this House as well as to the country with regard to the stand that we continuously took these 3 days on this side of the House. Before I proceed further, on this occasion, I want to pay my tribute to the Speaker, who in a consummate manner very skilfully handled the situation and averted any possible ugly situation that might have arisen, for which I am indeed personally grateful to him.

